# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:04.02.2013 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಎನ್. ಶಾಂತಕುಮಾರಿ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 3 | ಮೋಹನ್‌ಕುಮಾರ್ | ಸದಸ್ಯರು | ವಿಶೇಷ ಅಧಿಕಾರಿಗಳು |
| 4 | ಕೆ.ರವೀಂದ್ರನ್ | ಸದಸ್ಯರು | ಮಾಹಿತಿ ತಂತ್ರಜ್ಞಾನ ಸಲಹೆಗಾರರು |
| 5 | ಜೆ.ಭುವನೇಶ್ವರಿ | ಸದಸ್ಯರು | ಆಯುಕ್ತರ ಕಛೇರಿಯ ವ್ಯವಸ್ಥಾಪಕರುಗಳು |
| 6 | ಎಲ್.ನಾಗರತ್ನ | ಸದಸ್ಯರು | |
| 7 | ರಾಜಣ್ಣ | ಸದಸ್ಯರು | |
| 8 | ಎಸ್.ಎಂ. ಮುರುಗೇಶ್ ಮೊದಲಿಯಾರ್ | ಸದಸ್ಯರು | |
| 9 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | |
| 10 | ನಾಜಿನಿ ಬೇಗಂ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/30/2012-13**

**ನಿರ್ಣಯ:**

ದಿನಾಂಕ: 28.01.2013ರಂದು ಹೊರಡಿಸಿರುವ ಪ್ರಥಮ ದರ್ಜೆ ಸಹಾಯಕರ ಅಂತಿಮ ಸೇವಾ ಜೇಷ್ಠತಾ ಪಟ್ಟಿ (Final Gradation List) - ಬಿ12(1ಜಿ)/ಪಿಆರ್/10/1994-95/2012-13ಯಲ್ಲಿ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತದೆ.

- ನಗರ ಸಭೆ ಹಾಗೂ ಪುರ ಸಭೆಗಳಿಂದ ಪಾಲಿಕೆಗೆ ವಿಲೀನಾತಿಗೊಂಡಿರುವ ನೌಕರರುಗಳ ಬಗ್ಗೆ ಸಮಿತಿಯ ಆಕ್ಷೇಪಣೆಗಳಿಗೆ ಉತ್ತರ ನೀಡದೆ ಸದರಿ ನೌಕರಗಳನ್ನು ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರಿಸಿ ಅಂತಿಮಗೊಳಿಸಿರುವ ಕ್ರಮವು ನಿಯಮಬಾಹಿರವಾಗಿರುತ್ತದೆ. ಸದರಿ ಜೇಷ್ಠತಾ (Final Gradation List) ಪಟ್ಟಿಯಲ್ಲಿ ಇರುವ ಅನೇಕ ನಗರ ಸಭೆ ನೌಕರರುಗಳ ನೇಮಕಾತಿ ಕುರಿತಂತೆ ಸ್ಪಷ್ಟ ಆದೇಶವಿಲ್ಲದೆ ಇದ್ದರೂ ಸಹ ಸದರಿ ರವರಗಳನ್ನು ಸೇವಾ ಜೇಷ್ಠತಾ ಪಟ್ಟಿಯಲ್ಲಿ ಹಿರಿಯರೆಂದು ಪರಿಗಣಿಸಿದ್ದು ಇದರಿಂದ ಪಾಲಿಕೆಯ ಅರ್ಹ ನೌಕರರುಗಳಿಗೆ ಅನ್ಯಾಯವಾಗುತ್ತದೆ ಈ ಬಗ್ಗೆ ಸೂಕ್ತ ವಿವರಣೆ ನೀಡುವುದು ಹಾಗೂ ನಿಯಮಾನುಸಾರ ಕ್ರಮ ಕೈಗೊಳ್ಳುವುದು.

- ಸದರಿ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ:03ರಲ್ಲಿರುವ ನೌಕರರಾದ ಶ್ರೀ. ವಿಠಲಯ್ಯ, ಪ್ರ.ದ.ಸ ರವರನ್ನು ಹಿಂದಿನ ಚಿಕ್ಕಬಳ್ಳಾಪುರ ನಗರ ಸಭೆ ಅಧ್ಯಕ್ಷರು ಸೇವೆಗೆ ನೇಮಕಾತಿ ಮಾಡಿಕೊಂಡಿದ್ದು, ಯಾವುದೇ ಸರ್ಕಾರದ ಸ್ಪಷ್ಟ ಆದೇಶವಿರುವುದಿಲ್ಲವೆಂದು ಆಯುಕ್ತರ ಕಛೇರಿಯ ವಿಷಯ ನಿರ್ವಾಹಕರ ವರದಿಯಲ್ಲಿದ್ದು, ಆದಾಗ್ಯೂ ಸಹ ಇವರ ಸೇವೆಯನ್ನು ಪಾಲಿಕೆಯಲ್ಲಿ ವಿಲೀನಗೊಳಿಸಿಕೊಂಡು ಇವರನ್ನು ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡಿಸಿರುವ ಕ್ರಮವು ನಿಯಮಬಾಹಿರವಾಗಿರುತ್ತದೆ ಆದ್ದರಿಂದ ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳುವುದು.

- ನಗರ ಸಭೆಯಲ್ಲಿ ಸಮುದಾಯ ಸಂಘಟಕರಾಗಿ ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳನ್ನು ಪಾಲಿಕೆಯಲ್ಲಿ ಸದರಿ ಹುದ್ದೆ ಮಂಜೂರಾಗಿಲ್ಲದೇ(Non Sanctioned) ಇದ್ದು ಅವರುಗಳನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪರಿಗಣಿಸಲು ಸಾಧ್ಯವಿಲ್ಲ ಹಾಗೂ ಸದರಿ ನೌಕರರುಗಳು ಕೇಂದ್ರ ಸರ್ಕಾರದ ಒಂದು ಯೋಜನೆಯಲ್ಲಿ ತಾತ್ಕಾಲಿಕ ನೌಕರರುಗಳಾಗಿ ನೇಮಕಾತಿ ಹೊಂದಿದ್ದು. ಅವರುಗಳನ್ನು ಪಾಲಿಕೆಗೆ ವಿಲೀನಗೊಳಿಸಿಕೊಂಡಿರುವುದೇ ನಿಯಮ ಬಾಹಿರವಾಗಿದ್ದು. ತದನಂತರ ಅವರುಗಳಿಗೆ ಸೇವಾ ಹಿರಿತನದಲ್ಲಿ ಪಾಲಿಕೆಯ ನೌಕರರುಗಳಿಗಿಂತ ಹಿರಯರನ್ನಾಗಿ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿದ್ದು, ಇದರಿಂದ ಪಾಲಿಕೆಯ ಅರ್ಹ ಸಿಬ್ಬಂದಿಗಳಿಗೆ ಅನ್ಯಾಯವಾಗುವುದಲ್ಲದೆ ಅವರುಗಳು ಮುಂಬಡ್ತಿಯಿಂದ ವಂಚಿತರಾಗುತ್ತಾರೆ. (ಕ್ರ.ಸಂ: 190 ರಿಂದ 207ರ ವರೆಗೆ) ಈ ಸಂಬಂಧ ಸೂಕ್ತ ಕ್ರಮ ಕೈಗೊಂಡು ಸಮಿತಿಗೆ ವರದಿ ನೀಡತಕ್ಕದ್ದು.

- ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ನೌಕರರುಗಳು ಪರಿಕ್ಷಾರ್ಥ ಸೇವಾ ಅವಧಿ ಘೋಷಿಸಿಕೊಂಡಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಯಮದಂತೆ ಎಲ್ಲಾ ನೌಕರರುಗಳು ಸೇವೆಗೆ ಸೇರಿದ ಎರಡು ವರ್ಷಗಳೊಳಗಾಗಿ (ಅನುಮತಿ ಪಡೆದು ಮೂರು ವರ್ಷಗಳೊಳಗಾಗಿ) ಪರಿಕ್ಷಾರ್ಥ ಸೇವಾ ಅವಧಿ ಘೋಷಿಸಿಕೊಂಡಲ್ಲಿ ಮಾತ್ರ ಖಾಯಂ ನೌಕರರಾಗಲಿದ್ದು, ಇದನ್ನು ಪರಿಗಣಿಸದೇ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಪರೀಕ್ಷಾರ್ಥ ಸೇವಾ ಅವಧಿ ಘೋಷಿಸಿಕೊಳ್ಳದ ನೌಕರರಗಳನ್ನು ಸೇರ್ಪಡೆಗೊಳಿಸಿ ಸೇವಾ ಹಿರಿತನ ನೀಡಿರುವ ಕ್ರಮ ನಿಯಮಬಾಹಿರವಾದದ್ದು. (ಉಲ್ಲೇಖ: ಈ ಹಿಂದೆ ಪಾಲಿಕೆಯ ಕಾನೂನು ಇಲಾಖೆಯ ಕಿರಿಯ ಕಾನೂನು ಸಲಹೆಗಾರರಿಗೆ ಸಂಬಂಧಿಸಿದಂತೆ ಮಾನ್ಯ ಆಯುಕ್ತರ ಆದೇಶದಂತೆ ಪರೀಕ್ಷಾರ್ಥ ಸೇವಾ ಅವಧಿ ಘೋಷಿಸಿಕೊಳ್ಳದ ನೌಕರರನ್ನು ಸೇವಾ ಹಿರಿತನದಲ್ಲಿ ಕಿರಿಯರಿಗಿಂತ ಕಿರಿಯರನ್ನಾಗಿ ಪರಿಗಣಿಸಲಾಗಿರುತ್ತದೆ) ಆದ್ದರಿಂದ ಸದರಿ ಸೇವಾ ಜೇಷ್ಠತಾ ಪಟ್ಟಿಯಲ್ಲಿರುವ ಎಲ್ಲಾ ನೌಕರರುಗಳ ಪರೀಕ್ಷಾರ್ಥ ಅವಧಿ ಘೋಷಿಸಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಸೇವಾ ಹಿರಿತನ ನೀಡತಕ್ಕದ್ದು.

➢ ಪಾಲಿಕೆಗೆ ವಿಲೀನಗೊಂಡ ನಗರ ಸಭೆ, ಪುರಸಭೆ ಪ್ರಥಮ ದರ್ಜೆ ಗುಮಾಸ್ತರು ಮತ್ತು ಸಮುದಾಯ ಸಂಘಟಕರು ಪರೀಕ್ಷಾರ್ಥ ಅವಧಿಯನ್ನು (Probationary Period) ಘೋಷಿಸಿಕೊಂಡಿರುವ ಕುರಿತಂತೆ ಯಾವುದೇ ಮಾಹಿತಿಗಳು ಲಭ್ಯವಿಲ್ಲದೇ ಇದ್ದು, ಇಂತಹ ಹಲವಾರು ಅಪೂರ್ಣ ಮಾಹಿತಿಯನ್ನಾಧರಿಸಿ ತಯಾರಿಸಿರುವ ಅಂತಿಮ ಸೇವಾ ಜೇಷ್ಠತಾ ಪಟ್ಟಿಯು ಅಸಮರ್ಪಕವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

➢ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಅಂತಿಮಗೊಳಿಸಲು ಕೆ.ಸಿ.ಎಸ್.ಆರ್ ನಿಯಮದ ಅನುಸಾರ ಕ್ರಮವಹಿಸದೆ ನಿಯಮಬಾಹಿರವಾಗಿ ಅಂತಿಮಗೊಳಿಸಿರುವುದು ಹಾಗೂ ಸದರಿ ಜೇಷ್ಠತಾ ಪಟ್ಟಿಯು ಹಲವಾರು ಲೋಪದೋಷಗಳಿಂದ ಕೂಡಿರುವುದರಿಂದ ಸದರಿ ಜೇಷ್ಠತಾ ಪಟ್ಟಿಯನ್ನು ಪುನರ್‌ಪರಿಶೀಲಿಸುವ ಅವಶ್ಯಕತೆ ಇರುತ್ತದೆ.

➢ ಇಂತಹ ನಿಯಮಬಾಹಿರ ಸೇವಾ ಜೇಷ್ಠತಾ ಪಟ್ಟಿಯ ಅಧಾರದ ಮೇಲೆ ಮುಂಬಡ್ತಿ (Promotion) ನೀಡಿದ್ದಲ್ಲಿ, ಸುಮಾರು 200 ಮಂದಿ ಪಾಲಿಕೆಯ ಅರ್ಹ ನೌಕರುಗಳಿಗೆ ಮುಂಬಡ್ತಿ ವಂಚಿತರಾಗಿ ಅನ್ಯಾಯವಾಗುವ ಸಾಧ್ಯತೆ ಇರುವುದರಿಂದ ಈ ಒಂದು ಸೇವಾ ಜೇಷ್ಠತಾ ಪಟ್ಟಿಯನ್ನು ಪುನರ್ ಪರಿಶೀಲಿಸಿ ನಿಯಮಾನುಸಾರ ಅಂತಿಮಗೊಳಿಸುವವರೆಗೂ ಎಲ್ಲಾ ವೃಂದದ ಮುಂಬಡ್ತಿ ಪ್ರಕ್ರಿಯೆಗಳನ್ನು ತಡೆಹಿಡಿಯಲು ಸೂಚಿಸಿದೆ.

➢ ಅನುಬಂಧ–"ಅ" ರಲ್ಲಿರುವಂತೆ 05 ಬ್ಲಾಕ್ ಅವಧಿಗಳಲ್ಲಿ ಮುಂಬಡ್ತಿ ಮತ್ತು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿರುವ ರಿಕ್ತಸ್ಥಾನಗಳ ಸಂಖ್ಯೆಗಳನ್ನು ನಮೂದಿಸಿದ್ದು, ಆ ಸಂಖ್ಯೆಗಳಲ್ಲಿ ಭರ್ತಿ ಮಾಡಿರುವ ನೌಕರರುಗಳ ವಿವರ ಕಡತದಲ್ಲಿರುವುದಿಲ್ಲ ಹಾಗೂ ಅವುಗಳನ್ನು ಯಾವ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ. 1ನೇ ಹಾಗೂ 2ನೇ ಬ್ಲಾಕ್ ಅವಧಿಯಲ್ಲಿ ನೇರನೇಮಕಾತಿ ಮೂಲಕ ಕ್ರಮವಾಗಿ 49 & 56 ಹುದ್ದೆಗಳನ್ನು ಭರ್ತಿ ಮಾಡಿರುವುದಾಗಿ ತಿಳಿಸಿದ್ದು, ಆದರೆ ಪಾಲಿಕೆಯಲ್ಲಿ 2008ಅನ್ನು ಹೊರತು ಪಡಿಸಿ ಅಷ್ಟೊಂದು ಸಂಖ್ಯೆಯಲ್ಲಿ ನೇರನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ. ಆದ್ದರಿಂದ ಈ ಎರಡು ಬ್ಲಾಕ್ ಅವಧಿಯಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಿರುವ ನೌಕರರುಗಳ ಸಂಪೂರ್ಣ ವಿವರಗಳನ್ನು ಮರುಟಪಾಲಿನಲ್ಲಿ ಸಮಿತಿಯ ಅವಗಾಹನೆಗೆ ಮಂಡಿಸತಕ್ಕದ್ದು.

➢ ನಗರ ಸಭೆ/ ಪುರಸಭೆಗಳಿಂದ ಪಾಲಿಕೆಗೆ ವಿಲೀನಗೊಂಡ ನೌಕರರುಗಳನ್ನು ನೇರ ನೇಮಕಾತಿ ಹುದ್ದೆ ಎಂದು ಪರಿಗಣಿಸಿರುವುದಾಗಿ ತಿಳಿದು ಬಂದಿದ್ದು. ಆದರೆ ಸದರಿ ನೌಕರರುಗಳು ನೇರವಾಗಿ ಪ್ರಥಮ ದರ್ಜೆ ಸಹಾಯಕರಾಗಿ ನೇಮಕಾತಿ ಹೊಂದಿರುವುದಿಲ್ಲ. ಬದಲಾಗಿ ದ್ವಿತೀಯ ದರ್ಜೆ ಸಹಾಯಕ/"ಡಿ"–ಗ್ರೂಪ್/ಟೈಪಿಸ್ಟ್/ಕರ ವಸೂಲಿಗಾರರ/ಸುಂಕ ವಸೂಲಿಗಾರರುಗಳಂತಹ ಹುದ್ದೆಗಳಲ್ಲಿ

ದಿನಗೂಲಿ ಆಧಾರದ ಮೇಲೆ ನೇಮಕಾತಿ ಹೊಂದಿ ಪದೋನ್ನತಿ ಪಡೆದು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪಾದಾರ್ಪಣೆ ಮಾಡಿದ್ದು, ಅಂತಹ ನೌಕರರನ್ನು ನೇರ ನೇಮಕಾತಿ ಹುದ್ದೆ ಎಂದು ಪರಿಗಣಿಸಿರುವ ಕ್ರಮ ನಿಯಮಬಾಹಿರ ಹಾಗೂ ಇದರಿಂದ ವಿದ್ಯಾರ್ಹತೆ ಮೇಲೆ ಪಾಲಿಕೆಯಲ್ಲಿ ನೇರ ನೇಮಕಾತಿ ಹೊಂದಿರುವಂತಹ ನೌಕರರಿಗೆ ಅನ್ಯಾಯವಾಗಲಿದ್ದು, ಸದರಿ ನಗರ ಸಭೆ/ಪುರ ಸಭೆ ನೌಕರರುಗಳನ್ನು ಸರ್ಕಾರದ ಆದೇಶದಂತೆ ವಿಲೀನಗೊಳಿಸಿಕೊಂಡಿದ್ದು, ಆದರೆ ಸದರಿರವರುಗಳನ್ನು ಸೇವಾ ಜೇಷ್ಠತಾ ಪಟ್ಟಿಯಲ್ಲಿ ಕಿರಿಯರಿಗಿಂತ ಕಿರಯರನ್ನಾಗಿ ಪರಿಗಣಿಸ ಬೇಕಾಗಿರುವುದರಿಂದ ಈ ಸಂಬಂಧ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

- ಘನ ನ್ಯಾಯಾಲಯದ ಆದೇಶದಂತೆ ಪಾಲಿಕೆಯ ದಿನಗೂಲಿ ನೌಕರರನ್ನು ಕ್ರಮಬದ್ಧಗೊಳಿಸಿರುವುದು ಹಾಗೂ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುವುದು ಸರಿಯಷ್ಠೆ, ಆದರೆ ಅವರುಗಳ ಸೇವಾ ಹಿರಿತನಕ್ಕೆ ಸಂಬಂಧಿಸಿದಂತೆ ಅವರುಗಳನ್ನು ಮುಂಬಡ್ತಿ ಸ್ಥಳದಲ್ಲಿ ಪರಿಗಣಿಸಲಾಗಿದೆಯೇ? ಅಥವಾ ನೇರ ನೇಮಕಾತಿ ಎಂದು ಪರಿಗಣಿಸಲಾಗಿದೆಯೇ? ಸ್ಪಷ್ಟ ಆದೇಶದೊಂದಿಗೆ ವಿವರಣೆಯನ್ನು ಸಮಿತಿಯ ಅವಗಾಹನೆಗೆ ಮಂಡಿಸತಕ್ಕದ್ದು.

- ದಿನಾಂಕ:28.01.2013ರಲ್ಲಿ ಹೊರಡಿಸಿರುವ ಅಂತಿಮ ಸೇವಾ ಜೇಷ್ಠತಾ ಪಟ್ಟಿಯು 01.01.1988 ರಿಂದ 01.08.2012ರ ವರೆಗಿನ combined seniority list ಆಗಿದ್ದು, ಇದರಲ್ಲಿ ಮರಣ ಹೊಂದಿರುವ, ನಿವೃತ್ತ ಹೊಂದಿರುವ, ರಾಜಿನಾಮೆ ನೀಡಿರುವ ನೌಕರರುಗಳ ಸ್ಥಾನವನ್ನೂ ಸಹ ತೋರಿಸಿ ನಂತರ ಅಂತಿಮಗೊಳಿಸಬೇಕಾಗಿದ್ದು, ಅದನ್ನು ಪರಿಗಣಿಸದೆ ಹಾಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳನ್ನು ಮಾತ್ರ ತೋರಿಸಿದ್ದು, ಇದರಿಂದ ಅನೇಕ ನೌಕರರ ಸ್ಥಾನಗಳು ಜೇಷ್ಠತೆಯಲ್ಲಿ ಏರುಪೇರು ಆಗಲಿದ್ದು, ಇದನ್ನೂ ಸಹ ಪರಿಗಣಿಸುವ ಅವಶ್ಯಕತೆ ಇರುತ್ತದೆ.

- ಮೇಲ್ಕಂಡ ಅಂಶಗಳನ್ನು ಸರಿಪಡಿಸಲು ಕೋರಿ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಇರುವ ಹಲವಾರು ನೌಕರರುಗಳ ಅನೇಕ ಆಕ್ಷೇಪಣೆಗಳನ್ನು ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಹೊರಡಿಸಿದ್ದ ಸಂದರ್ಭದಲ್ಲಿ ನಿಯಮಾನುಸಾರ ನೀಡಿದ್ದರೂ ಸಹ ನೌಕರರುಗಳ ನ್ಯಾಯ ಸಮ್ಮತ ಆಕ್ಷೇಪಣೆಗಳನ್ನು ಪರಿಗಣಿಸದೇ, ಮನಸೋ ಇಚ್ಛೆ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ತಯಾರಿಸಿದ್ದು, ಇದರಿಂದ ಅನೇಕ ಅರ್ಹ ನೌಕರರುಗಳ ಮುಂಬಡ್ತಿ ವಂಚಿತರಾಗಲಿದ್ದು ಇದು ಪಾಲಿಕೆಯ ಆಡಳಿತದ ಮೇಲೆ ಅಡ್ಡ ಪರಿಣಾಮ ಬೀರುತ್ತದೆ. ಸದರಿ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವ ಮುನ್ನಾ ಸದರಿ ವೃಂದದ ನೌಕರರುಗಳಿಂದ ಸ್ವೀಕರಿಸಿರುವ ಆಕ್ಷೇಪಣೆಗಳಿಗೆ (Objections) ಸ್ಪಷ್ಠವಾದ ವಿವರಣೆ ನೀಡದೆ ಹಾಗೂ ನ್ಯಾಯಸಮ್ಮತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಗಣಿಸದೆ ಅಂತಿಮಗೊಳಿಸಿರುವ ಕ್ರಮವು ನಿಯಮಬಾಹಿರವಾಗಿರುತ್ತದೆ.

- ಅತೀ ಮುಖ್ಯವಾಗಿ ದಿನಾಂಕ:28.01.2013ರಂದು ಆಯುಕ್ತರು ಸಹಿಮಾಡಿ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಹೊರಡಿಸಿದ್ದು, ಈ ಅಂತಿಮ ಸೇವಾ ಜೇಷ್ಠತಾ ಪಟ್ಟಿಯು ಎಲ್ಲಾ ನೌಕರರುಗಳಿಗೆ ತಹಲ್‌ವರೆವಿಗೂ ತಲುಪಿರುವುದಿಲ್ಲ ಹಾಗೂ ಆಕ್ಷೇಪಣೆ ಸಲ್ಲಿಸಿದ್ದ ನೌಕರರುಗಳ ಆಕ್ಷೇಪಣೆಗಳ ಕುರಿತಂತೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿಚಾರಣಾ ಸಭೆಯ ನಡವಳಿಗಳನ್ನು ಸಂಬಂಧಪಟ್ಟ ನೌಕರರುಗಳಿಗೆ ನೀಡದೇ ಇದ್ದು ಹಾಗೂ ಕಡತದಲ್ಲಿರುವಂತೆ ಸದರಿ ಅಂತಿಮ ಸೇವಾ ಜೇಷ್ಠತಾ ಪಟ್ಟಿಯು ದಿನಾಂಕ:30.01.2013ರಂದು ಸಂಜೆ:5.00ಗಂಟೆಗೆ ಸ್ವೀಕೃತಿ ವಿಭಾಗಕ್ಕೆ ತಲುಪಿದ್ದು, ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಮುನ್ನವೇ ಅಂದರೆ ದಿನಾಂಕ:30.01.2013ರಂದೇ ಇಲಾಖಾ ಬಡ್ತಿ ಸಮಿತಿಯ ಮುಂದೆ ತರಾತುರಿಯಲ್ಲಿ ಮುಂಬಡ್ತಿ ನೀಡಲು ಆಯುಕ್ತರ ಕಛೇರಿಯ ವಿಷಯ ನಿರ್ವಾಹಕರು, ವ್ಯವಸ್ಥಾಪಕರು, ಸಹಾಯಕ ಆಯುಕ್ತರು(ಆಡಳಿತ-1), ಅಪರ ಆಯುಕ್ತರು(ಆಡಳಿತ) ರವರುಗಳು ಇಲಾಖಾ ಬಡ್ತಿ ಸಮಿತಿ ಸಭೆ ನಡೆಸಿ ಮುಂಬಡ್ತಿ ನೀಡಲು ರಾತ್ರೋರಾತ್ರಿ ಕಾರ್ಯನಿರ್ವಹಿಸಿ ಮುಂಬಡ್ತಿ ನೀಡಲು ಹೊರಟಿರುವುದು ಹಲವು ಅನುಮಾನಗಳಿಗೆ ಆಸ್ಪದ ಮಾಡಿಕೊಡುವುದೇ ಅಲ್ಲದೇ ಪಾರದರ್ಶಕತೆ ಕಾಯ್ದೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದು, ಈ ಪ್ರಕ್ರಿಯೆಯಲ್ಲಿ ಭಾರಿ ಮಟ್ಟದ ಅವ್ಯವಹಾರ ಆಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಈ ಬಗ್ಗೆ ಸೂಕ್ತ ತನಿಖೆ ಅಗತ್ಯ.

- ದಿನಾಂಕ:13.06.2012ರ ಘನ ಉಚ್ಚ ನ್ಯಾಯಾಲಯದ ರಿಟ್ ಸಂಖ್ಯೆ:1981–2011/2011 & 16818–16907/2011ರ ನ್ಯಾಯಾಲಯದ ವಿಭಾಗೀಯ ಪೀಠದ ಆದೇಶದ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ.

"In the circumstances, we are of the view that the order of the learned Single Judge has to be modified by allowing these appeals directing the Corporation of Bangalore to pass an appropriate order based on the direction issued by the state of Karnataka as per its order Dt.11.05.2006 and the order of the Corporation dated:21.10.1994 and on the report of taking proper decision for regularization of the Writ Petitioners, interse seniority of the appellants as-well as of the Writ Petitioners shall be made within two months from today. **It is needless to state that not only the appellants, the Writ Petitioners and appellants, the Writ Petitioners and even any other employees of the Corporation whose interest will be prejudiced on account of preparation of seniority are entitled to be heard in the matter and the Corporation shall invite objections from all the employees in order to avoid further litigation."**

ಸದರಿ ನ್ಯಾಯಾಲಯದ ಆದೇಶದಂತೆ ದೂರುದಾರರಾದ ದಿನಗೂಲಿ ನೌಕರರಲ್ಲದೇ ಸದರಿ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಬರುವ ಇತರೆ ನೌಕರರ ಆಕ್ಷೇಪಣೆಗಳನ್ನು ಕರೆದು ಪರಿಗಣಿಸುವಂತೆ ಆದೇಶವಿದ್ದರೂ ಸಹ ಸದರಿ ಜೇಷ್ಠತಾ ಪಟ್ಟಿಯಲ್ಲಿ ಬರುವ ನೌಕರರುಗಳ ನ್ಯಾಯಯುತವಾದ ಆಕ್ಷೇಪಣೆಗಳನ್ನು ಪರಿಗಣಿಸದೇ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಹೊರಡಿಸಿರುವುದು ನಿಯಮಬಾಹಿರ ಕ್ರಮವಾಗಿರುತ್ತದೆ.

- ಹಾಲಿ ತಯಾರಿಸಿರುವ ಇಲಾಖಾ ಬಡ್ತಿ ಸಮಿತಿ ಟಿಪ್ಪಣಿಯು ದಿನಾಂಕ:28.01.2013ರಂದು ಹೊರಡಿಸಿರುವ ಪ್ರಥಮ ದರ್ಜೆ ಗುಮಾಸ್ತರ ಅಂತಿಮ ಸೇವಾ ಜೇಷ್ಠತಾ ಪಟ್ಟಿಯ ಅನುಸಾರ ತಯಾರಿಸಲಾಗಿದೆಯೇ? ಈ ಬಗೆಗೂ ಸಹ ಸೂಕ್ತ ವಿವರಣೆ ನೀಡುವುದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನೌಕರರು ನೀಡಿರುವ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಂಡು ಮತ್ತೊಮ್ಮೆ ನಗರ ಸಭೆಯಿಂದ ವಿಲೀನಗೊಂಡಂತಹ ಸಿಬ್ಬಂದಿಗಳ ಸೇವಾ ವಿವರಗಳನ್ನು ಪರಿಶೀಲಿಸಿ ದೃಢೀಕರಿಸಿ ಆಕ್ಷೇಪಣೆಗಳಿರುವ ನೌಕರರನ್ನು ಸೇವಾ ಜೇಷ್ಠತೆಯಿಂದ ಹೊರಗಿಟ್ಟು ಅರ್ಹ ನೌಕರರುಗಳಿಗೆ ಸೇವಾ ಜೇಷ್ಠತೆಯನ್ನು ನೀಡಿ ನಂತರ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವುದು ಸಮಂಜಸವೆಂದು ಸಮಿತಿಯು ಅಭಿಪ್ರಾಯಿಸುತ್ತಾ, ಅಲ್ಲಿಯವರೆವಿಗೂ ಸಂಬಂಧಪಟ್ಟ ಎಲ್ಲಾ ಮುಂಬಡ್ತಿ ಪ್ರಕ್ರಿಯೆಗಳನ್ನು ತಡೆಹಿಡಿಯುವಂತೆ ಸಂಬಂಧಪಟ್ಟವರಿಗೆ ಆದೇಶಿಸಲು ಆಯುಕ್ತರನ್ನು ಕೋರಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

ಅಧ್ಯಕ್ಷರು
**ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

**ಪ್ರತಿಯನ್ನು:**

1) ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2) ಮಾನ್ಯ ಉಪ ಮಹಾ ಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3) ಮಾನ್ಯ ಸ್ಥಾಯಿ ಸಮಿತಿಯ ಅಧಕ್ಷರುಗಳ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
4) ಮಾನ್ಯ ಆಡಳಿತ ಪಕ್ಷದ/ವಿರೋಧ ಪಕ್ಷ/ಜೆ.ಡಿ(ಎಸ್) ಪಕ್ಷದ ನಾಯಕರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5) ಸಮಿತಿಯ ಎಲ್ಲಾ ಮಾನ್ಯ ಸದಸ್ಯರುಗಳ ಅವಗಾಹನೆಗೆ ಕಳುಹಿಸಿದೆ.
6) ಮಾನ್ಯ ಆಯುಕ್ತರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
7) ಅಪರ ಆಯುಕ್ತರು(ಆಡಳಿತ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8) ಉಪ/ಸಹಾಯಕ ಆಯುಕ್ತರು(ಆಡಳಿತ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9) ಕಛೇರಿ ಪ್ರತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:04.02.2013 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಎನ್. ಶಾಂತಕುಮಾರಿ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 3 | ಮೋಹನ್‌ಕುಮಾರ್ | ಸದಸ್ಯರು | ವಿಶೇಷ ಅಧಿಕಾರಿಗಳು |
| 4 | ಕೆ.ರವೀಂದ್ರನ್ | ಸದಸ್ಯರು | ಮಾಹಿತಿ ತಂತ್ರಜ್ಞಾನ ಸಲಹೆಗಾರರು |
| 5 | ಜೆ.ಭುವನೇಶ್ವರಿ | ಸದಸ್ಯರು | ಆಯುಕ್ತರ ಕಛೇರಿಯ ವ್ಯವಸ್ಥಾಪಕರುಗಳು |
| 6 | ಎಲ್.ನಾಗರತ್ನ | ಸದಸ್ಯರು | |
| 7 | ರಾಜಣ್ಣ | ಸದಸ್ಯರು | |
| 8 | ಎಸ್.ಎಂ. ಮುರುಗೇಶ್ ಮೊದಲಿಯಾರ್ | ಸದಸ್ಯರು | |
| 9 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | |
| 10 | ನಾಜಿನಿ ಬೇಗಂ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/26/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ದಿನಾಂಕ:12.12.2012ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರ ಕಾರ್ಮಿಕರ ಮತ್ತು ಆರೋಗ್ಯ ಗ್ಯಾಂಗ್‌ಮೆನ್ ಸಂಘ(ರಿ) ಇವರ ಬೇಡಿಕೆಗಳ ಕುರಿತು ನಡೆದ ಸಭೆಯಲ್ಲಿ ಈ ಕೆಳಕಂಡ ಬೇಡಿಕೆಗಳನ್ನು ಸಲ್ಲಿಸಿರುತ್ತಾರೆ.

ಪಾಲಿಕೆಯಲ್ಲಿ ಎಲ್ಲಾ ವೃಂದದ ನೌಕರರು ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಸಲ್ಲಿಸಿರುವ ಅರ್ಜಿಗಳಲ್ಲಿ ತಿರಸ್ಕೃತಗೊಂಡಿರುವ ಒಟ್ಟು 69 ಕಡತಗಳ ವಿವರಗಳನ್ನು ವಲಯದಿಂದ ಸ್ವೀಕರಿಸಿ, ಕ್ರೋಢಿಕರಿಸಲಾಗಿದೆ. ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಅರ್ಜಿಯನ್ನು ಒಂದು ವರ್ಷದ ಅವಧಿಯೊಳಗೆ ಸಲ್ಲಿಸದಿರುವುದು ಹಾಗೂ ಇತರೇ ಕಾರಣದಿಂದ ತಿರಸ್ಕೃತಗೊಂಡಿರುವ ಕಡತಗಳನ್ನು ಪರಿಗಣಿಸಲು ಕೋರಿರುತ್ತಾರೆ.

ಸದರಿ ಬೇಡಿಕೆಗೆ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಭರವಸೆ ನೀಡಲಾಗಿರುತ್ತದೆ. ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರ ಮತ್ತು ಆರೋಗ್ಯ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಗ್ಯಾಂಗ್‌ಮೆನ್(ರಿ) ಸಂಘ ಕೋರಿರುವಂತೆ ಅನುಕಂಪದ ಆಧಾರದ ಮೇಲೆ ತಿರಸ್ಕೃತಗೊಂಡಿರುವ ಕಡತಗಳನ್ನು ಪರಿಗಣಿಸಲು ಸರ್ಕಾರಕ್ಕೆ ಪತ್ರ ಬರೆಯುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:10.01.2013ರ ಸಂಖ್ಯೆ:ಬಿ12(ಸಿ1)/ಪಿಆರ್/25/2012-13ರ ಟಿಪ್ಪಣಿ.

**ನಿರ್ಣಯ:**

*ಪ್ರಸ್ತಾಪಿತ ಪ್ರಕರಣಗಳ ಎಲ್ಲಾ ಮೂಲ ಕಡತಗಳನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಗಳು ಸಮಿತಿಯ ಮುಂದೆ ಮಂಡಿಸಿ ವಿವರಿಸಲು ಸೂಚಿಸುವಂತೆ ಆಯುಕ್ತರವರನ್ನು ಕೋರಲು ಸಮಿತಿಯು ತೀರ್ಮಾನಿಸಿತು.*

**ವಿಷಯ ಸಂಖ್ಯೆ: ಸಿಆಸುಸ್ಥಾಸ/27/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಮಾನ್ಯ ಆಯುಕ್ತರ ದಿನಾಂಕ:28.02.2012ರ ಆದೇಶದ ಮೇರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ "GIS Based OFC, Road Cutting and Road History ಗಳ Automated Work Flow Solutions, ಆಸ್ತಿ ತೆರಿಗೆ, ಸಾರ್ವಜನಿಕ ಕುಂದುಕೊರತೆ ಹಾಗೂ ಜನನ ಮತ್ತು ಮರಣ ಪತ್ರಗಳ ಕಾರ್ಯವನ್ನು GIS Platform ಗೆ Integrate ಮಾಡುವ ತಂತ್ರಾಂಶವನ್ನು ಒದಗಿಸಿಕೊಂಡು ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುವ ಕಾಮಗಾರಿ ಮತ್ತು ಆಡಳಿತ ಕ್ರಮಗಳಲ್ಲಿ ಸುಧಾರಣೆ, ದಕ್ಷತೆ ಮತ್ತು ಪಾರದರ್ಶಕತೆಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಅಗತ್ಯವಿರುವ ತಂತ್ರಾಂಶವನ್ನು ಒದಗಿಸಿಕೊಳ್ಳುವ ಕುರಿತು ದಿನಾಂಕ:16.06.2012ರಂದು (Techno-Commercial Bid-QCBS) e-procurement ಮುಖಾಂತರ ಟೆಂಡರ್ ಕರೆಯಲಾಗಿತ್ತು.

ಈ ಸಂಬಂಧ ಸ್ವೀಕೃತವಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲು ಈ ಕೆಳಕಂಡ ಅಧಿಕಾರಿಗಳನ್ನು ಒಳಗೊಂಡ ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು.

| | |
|---|---|
| ವಿಶೇಷ ಆಯುಕ್ತರು(ಯೋಜನೆ) | ಅಧ್ಯಕ್ಷರು |
| ಉಪ ಆಯುಕ್ತರು (ಕಂದಾಯ) | ಸದಸ್ಯರು |
| ಪ್ರಧಾನ ಅಭಿಯಂತರರು | ಸದಸ್ಯರು |
| ಮುಖ್ಯ ಅಭಿಯಂತರರು(OFC) | ಸದಸ್ಯರು |
| ಕಾರ್ಯಪಾಲಕ ಅಭಿಯಂತರರು(OFC) | ಸದಸ್ಯರು |
| ಮುಖ್ಯಲೆಕ್ಕಾಧಿಕಾರಿಗಳು | ಸದಸ್ಯರು |
| ಮಾಹಿತಿ ತಂತ್ರಜ್ಞಾನ ಸಲಹೆಗಾರರು | ಸದಸ್ಯರು |
| ವ್ಯವಸ್ಥಾಪಕರು | ಸದಸ್ಯರು |
| ಕಿರಿಯ ಅಭಿಯಂತರರು(ಐ.ಟಿ) | ಸದಸ್ಯರು |

ಮುಂದುವರೆದು ಟೆಂಡರ್ ಪರಿಶೀಲನಾ ಸಮಿತಿಯ ಸಮ್ಮುಖದಲ್ಲಿ ದಿನಾಂಕ:31.12.2012ರಂದು Presentation covering their understanding of BBMP, Scope of work, Methodology and proposed activity details for effective implementation in the stipulated project timelines ಮತ್ತು ಇದುವರೆಗೂ ಈ ಬಗ್ಗೆ ಈ ಹಿಂದೆ ನಿರ್ವಹಿಸಿರುವ ಕೆಲಸಗಳ ಬಗ್ಗೆ ವಿವರವಾದ ಪ್ರಾತ್ಯಕ್ಷತೆಯನ್ನು ಟೆಂಡರ್‌ನಲ್ಲಿ ಭಾಗವಹಿಸಿದ ನಾಲ್ಕು ಸಂಸ್ಥೆಗಳು ನೀಡಿರುತ್ತವೆ. ಈ ಸಂಸ್ಥೆಗಳು ಒದಗಿಸಿದ ಮಾಹಿತಿಯನ್ನು ಆಧರಿಸಿ ತಾಂತ್ರಿಕ ಮೌಲ್ಯಮಾಪನ ಮಾಡಿ ಸಮಿತಿಯು ಸೂಕ್ತ ಅಂಕಗಳನ್ನು ನೀಡಿರುತ್ತದೆ.

ತದನಂತರ ಈ ನಾಲ್ಕು ಸಂಸ್ಥೆಗಳು ನೀಡಿದ್ದ ಆರ್ಥಿಕ ಬಿಡ್ಡ್‌ಗಳನ್ನು ದಿನಾಂಕ:07.01.2013ರಂದು ತೆರೆದು ಅವರು ಸಲ್ಲಿಸಿರುವ ಮೊತ್ತಕ್ಕೆ ಅನುಗುಣವಾಗಿ ಅಂಕಗಳನ್ನು ನೀಡಲಾಗಿರುತ್ತದೆ. ನಂತರ ತಾಂತ್ರಿಕ ಅರ್ಹತೆ ಮತ್ತು ಆರ್ಥಿಕ ಮೌಲ್ಯಮಾಪನಗಳ ಅಂಕಗಳನ್ನು ಸಂಯೋಜಿಸಿ (Weighted Average Scores) ಗಳ ವಿವರ ಕೆಳಕಂಡಂತೆ ನೀಡಲಾಗಿರುತ್ತದೆ.

| Sl. No | FIRM NAME | Technical Score | | Financila Score | | Total Weighted Average Score |
|---|---|---|---|---|---|---|
| | | Actual (Max: 100) | Weighted Avg Score for 70% (Max:70) | Cost As. | Marks Obtained (Max:30) | |
| 1 | M/S CyberTech Systems and Software Ltd | 72 | 63 | ₹ 2,21,02875/- | 30 | 93 |
| 2 | M/S Navayuga Spatial Technologies Pvt Ltd | 80 | 70 | ₹ 3,01,60566/- | 21.99 | 91.99 |
| 3 | M/s Infinite Computer Solutions (India) Ltd | 65 | 56.88 | ₹ 3,95,57688/- | 16.76 | 73.64 |
| 4 | M/s Rolta India Ltd | 70 | 61.25 | ₹ 2,64,09069/- | 25.11 | 86.36 |

**M/s CyberTech Systems and Software Ltd have quoted the lowest rate in the financial bid and also obtained the highest overall score among the bidders.*

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ M/s CyberTech Systems and Software Ltd ಸಂಸ್ಥೆಯ ಅತ್ಯಂತ ಹೆಚ್ಚಿನ ಅರ್ಹತೆಯನ್ನು ಪಡೆದಿರುವುದು ವೇದ್ಯವಾಗಿರುತ್ತದೆ.

ಈ ಮೇಲ್ಕಂಡ ವಿಷಯಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ "Development of GIS based enterprise class work flow and monitoring systems for BBMP" ಅನುಷ್ಠಾನಗೊಳಿಸಲು e-procurement ಮುಖಾಂತರ ಕರೆದಿದ್ದ ಟೆಂಡರ್‌ನಲ್ಲಿ **₹2,21,02875/- (Rupees Two Crores Twenty One Lakhs Two Thousand Eight Hundred and Seventy Five Only)** ತೆರಿಗೆ ಸಹಿತ ಮೊತ್ತವನ್ನು ನಮೂದಿಸಿ ಯಶಸ್ವಿ ಬಿಡ್ಡ್‌ದಾರರಾಗಿರುವ M/s CyberTech Systems and Software Ltd ಸಂಸ್ಥೆಯಿಂದ ಕಾರ್ಯಗತಗೊಳಿಸಲು ಅನುಮೋದನೆ ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:11.01.2013ರ ಸಂಖ್ಯೆ:BBMP/SYS/PR/20/2011-12ರ ಟಿಪ್ಪಣಿ.

**ನಿರ್ಣಯ:**

*ಆಯುಕ್ತರ ದಿನಾಂಕ:11.01.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.*

**ವಿಷಯ ಸಂಖ್ಯೆ: ಸಿಆಸುಸ್ಥಾಸ/29/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ರಚನೆಗೊಂಡು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ವ್ಯಾಪ್ತಿಗೆ 7 ನಗರ ಸಭೆ, 1 ಪುರ ಸಭೆ ಮತ್ತು 110 ಹಳ್ಳಿಗಳು ಸೇರ್ಪಡೆಗೊಂಡಿದ್ದು, ಇದರಿಂದಾಗಿ ಹಿಂದೆ ಇದ್ದ 100 ವಾರ್ಡ್‌ಗಳ ಬದಲಾಗಿ ಪ್ರಸ್ತುತ ಪಾಲಿಕೆಯಲ್ಲಿ 198 ವಾರ್ಡ್‌ಗಳು ವಿಂಗಡಣೆಗೊಂಡಿರುತ್ತದೆ.

ಈ ಪುನರ್ ವಿಂಗಡಣೆಯಿಂದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಮುಖ ಆಡಳಿತ ಕಛೇರಿಗಳಲ್ಲಿ ಕೆಲಸದ ಒತ್ತಡಗಳು ಹೆಚ್ಚಾಗಿದ್ದು, ಸದರಿ ಕಛೇರಿಗಳ ಪೈಕಿ ಕೌನ್ಸಿಲ್ ಕಾರ್ಯಾಲಯವು ಸಹ ಒಂದಾಗಿರುತ್ತದೆ. ಸದರಿ ಕೌನ್ಸಿಲ್ ಕಾರ್ಯಾಲಯದ ಅಧೀನದಲ್ಲಿ ಪೂಜ್ಯ ಮಹಾಪೌರರ ಕಛೇರಿ, ಉಪ ಮಹಾಪೌರರ ಕಛೇರಿ, ವಿವಿಧ ಪಕ್ಷದ ನಾಯಕರುಗಳ ಕಛೇರಿ ಹಾಗೂ 12 ಸ್ಥಾಯಿ ಸಮಿತಿಗಳಿದ್ದು, ಪ್ರತಿ ಸ್ಥಾಯಿ ಸಮಿತಿಗಳು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಅಡಿಯಲ್ಲಿ ವಾರಕ್ಕೊಂದು ಸಭೆಯನ್ನು ನಡೆಸಬೇಕಾಗಿರುತ್ತದೆ, ಸದರಿ 12 ಸ್ಥಾಯಿ

ಸಮಿತಿಗಳ ಪೈಕಿ ಎರಡು ಸ್ಥಾಯಿ ಸಮಿತಿಗಳು ದಿನಕ್ಕೊಂದು ಸಭೆಯನ್ನು ನಡೆಸುತ್ತಿದ್ದು, ಸದರಿ ಸಭೆಗಳಲ್ಲಿ ಪಾಲ್ಗೊಳ್ಳುವುದು, ಕೌನ್ಸಿಲ್ ಸಭೆಯ ವಿಷಯಗಳ ಸಭೆಯ ಅಜೆಂಡಾ ತಯಾರಿಕೆ ಹಾಗೂ ಇತರ ಜವಾಬ್ದಾರಿಯುತ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಕೌನ್ಸಿಲ್ ಕಾರ್ಯದರ್ಶಿ ಮತ್ತು ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಕೌನ್ಸಿಲ್ ಕಾರ್ಯದರ್ಶಿಯ ಹುದ್ದೆಯನ್ನು 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮ ಟೇಬಲ್ ಬಿಲೋ ರೂಲ್ 26ರ ಅಡಿಯಲ್ಲಿ ಎರವಲು ಸೇವೆಯ ಮೇಲೆ ತುಂಬಲು ಅವಕಾಶವಿರುತ್ತದೆ ಹಾಗೂ ಅಧಿಕ ಕೌನ್ಸಿಲ್ ಕಾರ್ಯದರ್ಶಿಯ ಹುದ್ದೆಯನ್ನು ಸಹಾಯಕ ಕಂದಾಯ ಅಧಿಕಾರಿ/ ಹಿರಿಯ ಕಾನೂನು ಅಧಿಕಾರಿ ಹುದ್ದೆ ಹೊಂದಿದ ಅಧಿಕಾರಿಗಳು, ಕಾನೂನು ಪದವಿ ಹೊಂದಿರುವ ಅಧಿಕಾರಿಗಳಿಂದ ತುಂಬಲು ಅವಕಾಶವಿರುತ್ತದೆ.

ಸದರಿ ನಿಯಮಾವಳಿಯನ್ವಯ ಪ್ರಸ್ತುತ ಶ್ರೀ. ಮಾರಿಯೋ ಪಿರೀಸ್ ರವರು ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರು ಮನವಿ ಸಲ್ಲಿಸಿ, ಪಾಲಿಕೆಗೆ ತಮ್ಮ ಸೇವೆಯು ಕೇವಲ ಎರಡು ವರ್ಷಗಳಿದ್ದು, ಕಾನೂನು ವಿಭಾಗದಲ್ಲಿ ತಮಗಿಂತ ಕಿರಿಯ ಅಧಿಕಾರಿಗಳು ತಮ್ಮ ಹುದ್ದೆಯ ಮೇಲ್ದರ್ಜೆಯ ಹುದ್ದೆಯಾದ ಉಪ ಕಾನೂನು ಅಧಿಕಾರಿ ಹುದ್ದೆಗೆ ಮುಂಬಡ್ತಿ ಹೊಂದಲು ಅವಕಾಶವಿದ್ದು, ತಮಗೆ ಮಾತ್ರ ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯಿಂದ ಬೇರೆ ಯಾವುದೇ ಹುದ್ದೆಯ ಬಡ್ತಿಗೆ ಅವಕಾಶವಿಲ್ಲವೆಂದು ತಿಳಿಸಿ, ತಾವು ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯಲ್ಲಿ ನಿವೃತ್ತಿ ಹೊಂದಬೇಕಾದ ಅನಿವಾರ್ಯತೆ ಇರುವುದಾಗಿ ತಿಳಿಸಿ, ಅಧಿಕ ಕೌನ್ಸಿಲ್ ಕಾರ್ಯದರ್ಶಿಯ ಹುದ್ದೆಯ ವೇತನ ಶ್ರೇಣಿಯಾದ ರೂ.28,100/– – ರೂ.51,000/–ಗಳಿಂದ ಮೇಲ್ದರ್ಜೆಯ ವೇತನ ಶ್ರೇಣಿ ರೂ.36,300/– ರಿಂದ 53,850/–ಗಳಿಗೆ ನಿಗಧಿಪಡಿಸಿದ್ದಲ್ಲಿ, ತಾವು ಈಗಾಗಲೇ ಸದರಿ ವೇತನ ಶ್ರೇಣಿಯ ಕನಿಷ್ಠ ವೇತನ ರೂ.36,300/–ಗಳನ್ನು ಪಡೆಯುತ್ತಿರುವುದರಿಂದ ಒಂದು ವಾರ್ಷಿಕ ವೇತನ ಮೊತ್ತವಾದ ರೂ.900/–ಗಳನ್ನು ಮಾತ್ರ ಹೆಚ್ಚುವರಿಯಾಗಿ ಪಡೆಯಲು ಅವಕಾಶವಾಗಲಿದ್ದು, ಇದರಿಂದಾಗಿ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲವೆಂದು ತಿಳಿಸಿ, ಅಧಿಕ ಕೌನ್ಸಿಲ್ ಕಾರ್ಯದರ್ಶಿಯ ಹುದ್ದೆಯನ್ನು ವೇತನ ಶ್ರೇಣಿ ರೂ.28,100/– – ರೂ.51,000/– ರಿಂದ ವೇತನ ಶ್ರೇಣಿ ರೂ.36,300–53,850/–ಗಳಿಗೆ ಮೇಲ್ದರ್ಜೆಗೇರಿಸುವಂತೆ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿ, ***The alteration of establishment can be done under Article 107 of the Karnataka Financial Code 1958*** ಕೆಳಕಂಡಂತೆ ವಿವರಿಸುತ್ತದೆ:

***"The Head of the Department or other authority concerned should scrutinize with the greatest care every proposal for an addition to an establishment. Whether permanent or temporary or for increase in the***



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

***emoluments of an existing post. He should examine the financial implications thoroughly and should not submit the proposal to the Government unless he satisfied that it is essential***".

ಮೇಲ್ಕಂಡ ನಿಯಮದನ್ವಯ ಯಾವುದೇ ಹುದ್ದೆಯ ವೇತನ ಶ್ರೇಣಿಯನ್ನು ಮೇಲ್ದರ್ಜೆಗೆ ಏರಿಸಬೇಕಾದ ಪಕ್ಷದಲ್ಲಿ ಇಲಾಖಾ ಮುಖ್ಯಸ್ಥರು ಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ ಈ ರೀತಿ ವೇತನ ಶ್ರೇಣಿಯನ್ನು ಮೇಲ್ದರ್ಜೆಗೆ ಏರಿಸಿದ ಪಕ್ಷದಲ್ಲಿ ಇಲಾಖೆಗೆ ತಗಲಬಹುದಾದ ಅಧಿಕ ಆರ್ಥಿಕ ವೆಚ್ಚ ಮತ್ತು ಈ ರೀತಿ ಯಾವುದೇ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸಲು ಅವಶ್ಯಕತೆ ಇದೆಯೇ ಎಂಬುದನ್ನು ಪರಿಶೀಲಿಸಬೇಕು ಎಂದಿರುತ್ತದೆ.

ಮೇಲ್ಕಂಡ ಅಂಶವನ್ನು ಅವಲೋಕಿಸಿದಾಗ, ಶ್ರೀ ಮಾರಿಯೋ ಪಿರೀಸ್, ಅಧಿಕ ಕೌನ್ಸಿಲ್ ಕಾರ್ಯದರ್ಶಿ ರವರ ಸೇವೆಯು ಕೇವಲ ಎರಡು ವರ್ಷಗಳಿದ್ದು, ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯಿಂದ ಬೇರೆ ಯಾವುದೇ ಹುದ್ದೆಯ ಬಡ್ತಿಗೆ ಅವಕಾಶವಿಲ್ಲದೆ ಇದ್ದು, ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯಲ್ಲಿಯೇ ನಿವೃತ್ತಿ ಹೊಂದಬೇಕಾದ ಕಾರಣ, ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯ ವೇತನ ಶ್ರೇಣಿಯಾದ ರೂ.28,100/- – ರೂ51,100/-ಗಳಿಂದ ವೇತನ ಶ್ರೇಣಿ ರೂ.36,300-53,850/-ಗಳಿಗೆ ಮೇಲ್ದರ್ಜೆಗೆ ಏರಿಸಿದ್ದಲ್ಲಿ, ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯಾಗದೇ ಇರುವುದು ಕಂಡು ಬಂದಿರುವುದರಿಂದ, ತಾತ್ಕಾಲಿಕವಾಗಿ ಶ್ರೀ. ಮಾರಿಯೋ ಪಿರೀಸ್, ಅಧಿಕ ಕೌನ್ಸಿಲ್ ಕಾರ್ಯದರ್ಶಿರವರ ನಿವೃತ್ತಿಯರವರೆಗೆ ಸದರಿಯವರ ವೇತನ ಶ್ರೇಣಿಯನ್ನು ರೂ.28,100/- – ರೂ.51,000/- ರಿಂದ ವೇತನ ಶ್ರೇಣಿ ರೂ.36,300-53,850/-ಗಳಿಗೆ ಮೇಲ್ದರ್ಜೆಗೇರಿಸುವ ಬಗ್ಗೆ ಸೂಕ್ತ ಅನುಮೋದನೆ ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:01.02.2013ರ ಸಂಖ್ಯೆ:ಬಿ12(3ಎ)/ಸಿಪಿಆರ್/72/2012-13ರ ಟಿಪ್ಪಣಿ.

**ನಿರ್ಣಯ:**

*ಆಯುಕ್ತರ ದಿನಾಂಕ:01.02.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.*

**ಅಧ್ಯಕ್ಷರು**
**ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:12.02.2013 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಎನ್. ಶಾಂತಕುಮಾರಿ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 3 | ಕೆ.ರವೀಂದ್ರನ್ | ಸದಸ್ಯರು | ವಿಶೇಷ ಅಧಿಕಾರಿಗಳು |
| 4 | ಜೆ.ಭುವನೇಶ್ವರಿ | ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ)–I & II |
| 5 | ಎಸ್.ಎಂ. ಮುರುಗೇಶ್ ಮೊದಲಿಯಾರ್ | ಸದಸ್ಯರು | ಆಯುಕ್ತರ ಕಛೇರಿಯ ವ್ಯವಸ್ಥಾಪಕರುಗಳು |
| 6 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | |
| 7 | ನಾಜಿನಿ ಬೇಗಂ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/16/2012–13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಶ್ರೀ ಕೆ.ಎನ್. ಬಾಬುರೆಡ್ಡಿ, ಕಿರಿಯ ಅಭಿಯಂತರರು(ವಿದ್ಯುತ್), ದಿ ಮೈಸೂರು ಲ್ಯಾಂಪ್ಸ್ ಲಿಮಿಟೆಡ್, ಬೆಂಗಳೂರು ಇವರನ್ನು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ನಗರ ಪಾಲಿಕೆಯ ಎರವಲು ಸೇವೆಯ ಮೇಲೆ ನಿಯೋಜಿಸಲಾಗಿರುವಂತೆ, ಸದರಿ ಅಭಿಯಂತರರು ದಿನಾಂಕ:27–06–2003ರ ಅಪರಾಹ್ನದಂದು ನಗರ ಪಾಲಿಕೆಯಲ್ಲಿ ಹಾಜರಾತಿ ವರದಿ ಸಲ್ಲಿಸಿ, ಕಾರ್ಯನಿರ್ವಹಿಸುತ್ತಿರುತ್ತಾರೆ.

ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯುತ್ ವಿಭಾಗದಲ್ಲಿ ಕಿರಿಯ ಅಭಿಯಂತರರು(ವಿದ್ಯುತ್) ಹುದ್ದೆಗಳು ಕೊರತೆ ಇರುವುದರಿಂದ ಪಾಲಿಕೆ ವಿದ್ಯುತ್ ವಿಭಾಗದ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಶ್ರೀ ಕೆ.ಎನ್. ಬಾಬುರೆಡ್ಡಿ, ಕಿರಿಯ ಅಭಿಯಂತರರು(ವಿದ್ಯುತ್), ಇವರನ್ನು ನಗರ ಪಾಲಿಕೆಯಲ್ಲಿ ವಿಲೀನಗೊಳಿಸಲು ಹಿಂದಿನ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆ: ತೆ ಅಂಡ್ ಆ/20/2006–07, ದಿನಾಂಕ:28–04–2006ರಲ್ಲಿ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನ ವಿಷಯ ಸಂಖ್ಯೆ: 46(50), ದಿ: 12–06–2006 ರಲ್ಲಿ ಅನುಮೋದನೆ ನೀಡಿರುತ್ತದೆ. ಆದ್ದರಿಂದ ಸದರಿ ಅಭಿಯಂತರರನ್ನು ನಗರ ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಲು ದಿನಾಂಕ:02.08.2006ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.



ಅಧ್ಯಕ್ಷರು

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ಕಾರವು ದಿನಾಂಕ:28-02-2012ರಂದು ಕರಡು ನಿಯಮಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಸದರಿ ಕರಡು ನಿಯಮಗಳಿಗೆ ನಿಗಧಿತ ಅವಧಿಯಲ್ಲಿ ಸ್ವೀಕರಿಸುವ ಆಕ್ಷೇಪಣೆ / ಸಲಹೆಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಕೋರಲಾಗಿರುತ್ತದೆ.

ಇದರಂತೆ, ಶ್ರೀ ಕೆ.ಎನ್. ಬಾಬುರೆಡ್ಡಿ, ಕಿರಿಯ ಅಭಿಯಂತರರು(ವಿದ್ಯುತ್), ದಿ ಮೈಸೂರು ಲ್ಯಾಂಪ್ಸ್ ಲಿಮಿಟೆಡ್, ಬೆಂಗಳೂರು ಇವರನ್ನು ನಗರ ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸ್ವೀಕರಿಸಲಾಗಿರುವ ಈ ಕೆಳಕಂಡವರುಗಳ ಆಕ್ಷೇಪಣೆಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗಿರುತ್ತದೆ.

| ಕ್ರ.ಸಂ. | ಆಕ್ಷೇಪಣೆದಾರರ ಹೆಸರು | ವಿಳಾಸ |
|---|---|---|
| 1. | ಶ್ರೀ ಎಂ. ಉದಯಕುಮಾರ್ | ವಿರೋಧ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು |
| 2. | ಶ್ರೀ ಪದ್ಮನಾಭರೆಡ್ಡಿ | ಜೆ.ಡಿ. (ಎಸ್) ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು |
| 3. | ಅಧ್ಯಕ್ಷರು, | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಹಾಗೂ ನೌಕರರ ಕೇಂದ್ರೀಯ ಸಂಘ (ನೊಂ), ನಂ. 922, 20ನೇ ಮುಖ್ಯರಸ್ತೆ, 2ನೇ ಹಂತ, ಬನಶಂಕರಿ, ಬೆಂಗಳೂರು-70 |
| 4. | ಅಧ್ಯಕ್ಷರು ಮತ್ತು ಇತರರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇಂಜಿನಿಯರುಗಳ ಕ್ಷೇಮಾಭಿವೃದ್ಧಿ ಸಂಘ (ನೋಂ), ನಂ. 12, 1ನೇ ಬ್ಲಾಕ್ ಈಸ್ಟ್, ಬೆಂಗಳೂರು-11 |
| 5. | ಶ್ರೀ ವೆಂಕಟರತ್ನಯ್ಯ | ನಂ. 18, 1ನೇ ಮುಖ್ಯರಸ್ತೆ, 7ನೇ ಕ್ರಾಸ್, ಗೌಡನಪಾಳ್ಯ, ಬೆಂಗಳೂರು |
| 6. | ಶ್ರೀ ಸಿ.ಎಂ. ಮಂಜುನಾಥ್ | ನಂ. 48, 15ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು-96 |
| 7. | ವಿ.ಎಸ್. ವಿದ್ಯಾಮಂಜರಿ | ನಂ. 122, 1ನೇ ಅಡ್ಡರಸ್ತೆ, ಸುದ್ದಗುಂಟೆ ಪಾಳ್ಯ, ವೆಂಕಟೇಶ್ವರ ಲೇಔಟ್, ಡಿಆರ್‌ಸಿ ಪೋಸ್ಟ್, ಬೆಂಗಳೂರು-29 |
| 8. | ಆರ್. ಚೇತನ್ | ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು-64 |
| 9. | ಲಿಂಗರಾಜು | ನಂ. 133, ಥಣಿಸಂದ್ರ, ಜಾಲಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು |

ಸರ್ಕಾರವು ಶ್ರೀ ಕೆ.ಎನ್. ಬಾಬುರೆಡ್ಡಿ, ಕಿರಿಯ ಅಭಿಯಂತರರು(ವಿದ್ಯುತ್), ದಿ ಮೈಸೂರು ಲ್ಯಾಂಪ್ಸ್ ಲಿಮಿಟೆಡ್, ಬೆಂಗಳೂರು ಇವರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸ್ವೀಕರಿಸಲಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸರ್ಕಾರವು ಅಧಿಸೂಚನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ಸಹಾಯಕ / ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿದ್ದು, ಸದರಿ ಅಧಿಸೂಚನೆಯು ಈ ಕೆಳಕಂಡಂತೆ ಇರುತ್ತದೆ.

"Whereas, the draft of the Karnataka Municipal Corporations (Absorption of Junior Engineers appointed on deputation basis in Bruhat Bangalore Mahanagara Palike (Special) Rules, 2011 which the Government of Karnataka proposes to make in exercise of the powers conferred by sub-section (1) of section 91 read with section 421 of the Karnataka Municipal Corporations Act, 1976 (Karnataka Act 14 of 1977) was published in Notification No. UDD 911 MNY 2011, dated 28-02-2012 in part IV-A of the Karnataka Gazette, Extra-ordinary, dated 28-02-2012 inviting objections and suggestions from all persons likely to be affected thereby within fifteen days from the date of its publication in the Official Gazette.

Whereas, the said Gazette was made available to the public on 28-02-2012.

And whereas, the objections and suggestions were received in respect of the said draft rules have been examined by the Government.

Now, therefore, in exercise of the powers conferred by Section 421 of the Karnataka Municipal Corporations Act, 1976 (Karnataka Act 14 of 1977), the Government of Karnataka hereby makes the following rules, namely:

**RULES**

1. **Title and commencement:** (1) These rules may be called the Karnataka Municipal Corporations (Absorption of Junior Engineers appointed on deputation basis in Bruhat Bangalore Mahanagara Palike (Special) Rules, 2012

   (2) They shall come into force from the date of their publication in the Official Gazette.

2. **Definitions:** (1) In these rules, unless the context otherwise, requires,-

   (a) "Deputation Junior Engineers" means a Junior Engineer (Electrical) appointed in the Bruhat Bangalore Mahanagara Palike on deputation basis from Mysore Lamps Works Limited.
   (b) "Schedule" means schedule appended to these Rules.
   (c) Other words and expressions used in these rules but not defined shall have the same meaning respectively assigned to them in the Karnataka municipal Corporations Rules, 1977.

3. **Absorption of Deputation Junior Engineer in the Bruhat Bangalore Mahanagara Palike** – Notwithstanding anything contained in the Karnataka Municipal Corporations Rules, 1977 or any other rules made or deemed to have been made under the provisions of the Karnataka Municipal Corporations Act, 1976 (Karnataka Act 14 of 1977), governing the method of recruitment of the employees of the Bruhat Bangalore Mahanagara Palike every Deputation Junior Engineer as Specified in

Column (2) of the Schedule and continues as such in the Bruhat Bangalore Mahanagara palike on the date of commencement of these rules,

be absorbed in the corresponding category of post and scale of pay specified in Columns (5) and (6) respectively, in the Bruhat Bangalore Mahanagara Palike Services.

Provided that no such person shall be absorbed;

(i) If he was disqualified for appointment under the Karnataka Municipal Corporations Rules, 1977 on the date of appointment as Junior Engineer in the Mysore Lamps Works Limited;

(ii) If he does not possess the minimum academic qualification, if any, specified in the rules of recruitment applicable for the recruitment to the post, in which he is absorbed;

(iii) In any post reserved for the persons belonging to the category of Schedule castes or Scheduled Tribes or other backward classes to which he was appointed as deputation Junior Engineer if he is found to be not belonging to such category. Otherwise such posts shall be treated as backlog to be filled by process of Special recruitment from among these classes.

4. **Pay, Pension, Leave and Seniority of persons absorbed under these rules:** Notwithstanding anything contained in the Karnataka Municipal Corporations Rules, 1977.

(i) The initial basic pay of deputations Junior Engineer absorbed under these rules shall be fixed at the minimum of the pay scale applicable to the category of post to which he is absorbed under rule 3.

(ii) The services rendered by a person on deputation Junior Engineer prior to the date of absorption shall count for the purpose of leave, pension, but not for pay and seniority and grant of selection time scale of pay under Karnataka Civil Services (Time Bound Advancement) Rules, 1983 or for grant of selection time scale of pay under the Karnataka Civil Services (Automatic grant of special promotion to the senior scale of pay) Rules, 1991 and additional increment for having completed twenty years of service in the single cadre.

(iii) As regards pension and other retirement benefits, he shall be governed by terms and Conditions as stipulated in government order No. FD (Spl) 04 PET 2005, dated: 31-03-2006, i.e., new Defined Contributory pension scheme introduced w.e.f. 01.04.2006 and / or pension policy of the Bruhath Bangalore Mahanagara Palike.

(iv) The Deputationist so absorbed shall not receive any ex-gratia amount from his parent organization under the Voluntary Retirement Scheme and would be deemed to have resigned in the Parent organization.

**SCHEDULE**

**(NOTIFICATION NO. UDD 31 MNY 2008, DATED: 31-10-2011)**

(See Rule-3)

| Sl. No . | Name of the deputation Engineers | Designatio n | Date of Deputation in BBMP | Post in which absorbed | Scale of pay of the post in which absorbed (Rs) |
|---|---|---|---|---|---|
| 1. | K.N. Babureddy | Junior Engineer (Electrical) | 27.06.2003 | Junior Engineer (Electrical) | Rs. 8825-16000 (As per KCS (Revised Pay) Rules 2007} Rs. 17650-32000 (As per KCS (Revised Pay) Rules 2012) |

ಆದ್ದರಿಂದ ಶ್ರೀ ಕೆ.ಎನ್. ಬಾಬುರೆಡ್ಡಿ, ಕಿರಿಯ ಅಭಿಯಂತರರು (ವಿದ್ಯುತ್), ದಿ ಮೈಸೂರು ಲ್ಯಾಂಪ್ಸ್ ಲಿಮಿಟೆಡ್, ಬೆಂಗಳೂರು, ಇಲ್ಲಿಂದ ಎರವಲು ಸೇವೆಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಇವರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಯುಡಿಡಿ 911 ಎಂಎನ್‌ವೈ 2010, ದಿನಾಂಕ:17-07-2012ನ್ನು ಪಾಲಿಕೆಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:05.02.2013ರ ಸಂಖ್ಯೆ:ಬಿ12(6)/ಪಿಆರ್/47/2003-04ರ ಟಿಪ್ಪಣಿ.

**ನಿರ್ಣಯ:**

*ಆಯುಕ್ತರ ದಿನಾಂಕ:05.02.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.*

**ವಿಷಯ ಸಂಖ್ಯೆ: ಸಿಆಸುಸ್ಥಾಸ/31/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ರ ನಿಯಮ 2 ಮತ್ತು 3ಕ್ಕೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ:ಸಿಆಸುಇ/55/ಸೇಅನೇ2012, ದಿನಾಂಕ:11.07.2012ರ ರೀತ್ಯಾ ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ.

**ನಿಯಮ 2ಕ್ಕೆ ತಿದ್ದುಪಡಿ:** ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗುವುದು)ರ ನಿಯಮ 2ರ ಉಪ ನಿಯಮ (1)ರ

(i) ಖಂಡ (ಎ)ರಲ್ಲಿ ಅಂಶ (ii)ರ ನಂತರ ಕೆಳಕಂಡವುಗಳನ್ನು ಸೇರಿಸತಕ್ಕದ್ದು, ಅಂದರೆ:-

(iii) ಅವಿವಾಹಿತ ಪುರುಷ ಮೃತ ಸರ್ಕಾರಿ ನೌಕರನ ಪ್ರಕರಣಕ್ಕೆ ಸಂಬಂಧಿಸಿದಂತೆ, ಆತನ ಮೇಲೆ ಅವಲಂಬಿತರಾಗಿದ್ದ ಹಾಗೂ ಆತನೊಂದಿಗೆ ವಾಸಿಸುತ್ತಿದ್ದ ಆತನ ಅವಿವಾಹಿತ ಸಹೋದರ, ಅವಿವಾಹಿತ ಅಥವಾ ವಿಧವ ಸಹೋದರಿ, ಮತ್ತು

(iv) ಅವಿವಾಹಿತ ಮೃತ ಮಹಿಳಾ ಸರ್ಕಾರಿ ನೌಕರಳ ಪ್ರಕರಣಕ್ಕೆ ಸಂಬಂಧಿಸಿದಂತೆ, ಆಕೆಯ ಮೇಲೆ ಅವಲಂಬಿತರಾಗಿದ್ದ ಹಾಗೂ ಆಕೆಯೊಂದಿಗೆ ವಾಸಿಸುತ್ತಿದ್ದ ಆಕೆಯ ಅವಿವಾಹಿತ ಸಹೋದರ, ಅವಿವಾಹಿತ ಅಥವಾ ವಿಧವಾ ಸಹೋದರಿ

(ii) ಖಂಡ (ಬಿ)ರಲ್ಲಿ "ವಿಧವಾ ಮಗಳು" ಪದಗಳ ನಂತರ "ಅವಿವಾಹಿತ ಸಹೋದರ, ಅವಿವಾಹಿತ ಅಥವಾ ವಿಧವಾ ಸಹೋದರಿ: ಎಂಬ ಪದಗಳನ್ನು ಸೇರಿಸತಕ್ಕದ್ದು.

**ನಿಯಮ 3ಕ್ಕೆ ತಿದ್ದುಪಡಿ**: ನಿಯಮ 3ರ ಉಪ ನಿಯಮ (2)ರಲ್ಲಿ ಖಂಡ (i)ರ ನಂತರ ಈ ಕೆಳಕಂಡವುಗಳನ್ನು ಸೇರಿಸತಕ್ಕದ್ದು, ಅಂದರೆ:-

(iಎ) ಅವಿವಾಹಿತ ಮೃತ ಪುರುಷ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ:-
ಆತನ ಮೇಲೆ ಅವಲಂಬಿತರಾಗಿದ್ದ ಹಾಗೂ ಆತನೊಂದಿಗೆ ವಾಸಿಸುತ್ತಿದ್ದ ಆತನ

(ಎ) ಅವಿವಾಹಿತ ಸಹೋದರ

(ಬಿ) ಅವಿವಾಹಿತ ಅಥವಾ ವಿಧವಾ ಸಹೋದರಿ

(ii) ಖಂಡ (ii)ರ ನಂತರ ಈ ಕೆಳಕಂಡವುಗಳನ್ನು ಸೇರಿಸತಕ್ಕದ್ದು, ಅಂದರೆ:-

(iiಎ) ಅವಿವಾಹಿತ ಮೃತ ಮಹಿಳಾ ಸರ್ಕಾರಿ ನೌಕರಳಿಗೆ ಸಂಬಂಧಿಸಿದಂತೆ:-
ಆಕೆಯ ಮೇಲೆ ಅವಲಂಬಿತರಾಗಿದ್ದ ಹಾಗೂ ಆಕೆಯೊಂದಿಗೆ ವಾಸಿಸುತ್ತಿದ್ದ ಆಕೆಯ

(ಎ) ಅವಿವಾಹಿತ ಸಹೋದರ

(ಬಿ) ಅವಿವಾಹಿತ ಅಥವಾ ವಿಧವಾ ಸಹೋದರಿ

ಆದುದರಿಂದ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆಯನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:01.02.2013ರ ಸಂಖ್ಯೆ:ಬಿ12(5ಜಿ)ಪಿಆರ್/378/2012-13ರ ಟಿಪ್ಪಣಿ.

**ನಿರ್ಣಯ:**

*ಆಯುಕ್ತರ ದಿನಾಂಕ:01.02.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.*

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ವಿಷಯ ಸಂಖ್ಯೆ: ಪಿಆಸುಸ್ಥಾಪ/32/2012-13

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಂಜೂರಾತಿಯಾಗಿ ಖಾಲಿ ಇರುವ 4,000 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಿಕೊಳ್ಳಲು ಈ ಕೆಳಕಂಡ ಷರತ್ತಿನನ್ವಯ ಸರ್ಕಾರವು ದಿನಾಂಕ:13.01.2010ರಂದು ಅನುಮೋದನೆ ನೀಡಿರುತ್ತದೆ.

ಷರತ್ತುಗಳು:-

1. ಹುದ್ದೆಗಳ ನೇಮಕಾತಿಯಿಂದ ತಗಲುವ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಪನ್ಮೂಲದಿಂದಲೇ ಭರಿಸತಕ್ಕದ್ದು.
2. ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವಾಗ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವಿಧಿವಿಧಾನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಸಂಬಂಧ ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆರವರಿಗೆ ವಿದ್ಯಾರ್ಹತೆಯನ್ನು 5ನೇ ತರಗತಿ ಉತ್ತೀರ್ಣ ಅಥವಾ 7ನೇ ತರಗತಿ ಅನುತ್ತೀರ್ಣ ಎಂದು ನಿಗದಿಪಡಿಸುವಂತೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ತಿದ್ದುಪಡಿ ತರುವ ಬಗ್ಗೆ ದಿನಾಂಕ:05.09.2012ರಂದು ಪತ್ರವನ್ನು ಬರೆದಿದ್ದು, ಈ ಬಗ್ಗೆ ದಿನಾಂಕ:10/09/2012ರ ಸರ್ಕಾರದ ಪತ್ರದಲ್ಲಿ ತಿಳಿಸಿರುವಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತರಬೇಕಾಗಿರುವ ತಿದ್ದುಪಡಿಯ ಕರಡನ್ನು ಜರೂರಾಗಿ ಕಳುಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ ಎಂದು ತಿಳಿಸಿರುತ್ತಾರೆ. ಇದರಂತೆ 4000 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಪಾಲಿಕೆಯಲ್ಲಿ ಸದ್ಯ ಪ್ರಸ್ತಾವನೆಯಲ್ಲಿರುತ್ತದೆ. ಈ ಸಂಬಂಧ ಸರ್ಕಾರದ ಪೂರ್ವಾನುಮತಿ ಮತ್ತು ಆಡಳಿತಾತ್ಮಕ ಅನುಮೋದನೆಯ ನಿರೀಕ್ಷಣೆಯ ಮೇರೆಗೆ ಪೌರಕಾರ್ಮಿಕರ ನೇರ ನೇಮಕಾತಿ ಹುದ್ದೆಗೆ ಜಾಹಿರಾತು ಮುಖೇನ ಅರ್ಜಿ ಸ್ವೀಕರಿಸಲು **ಹಾಗೂ** ಸದರಿ ಹುದ್ದೆಯ ನೇರ ನೇಮಕಾತಿ ಕುರಿತಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತರಬೇಕಾಗಿರುವ ತಿದ್ದುಪಡಿಯ ಕರಡನ್ನು ಈ ಕೆಳಕಂಡಂತೆ ತಯಾರಿಸಿ ಅನುಮೋದನೆಯನ್ನು ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:01.02.2013ರ ಸಂಖ್ಯೆ:ಸ.ಅ.ನೇ/ಪಿಆರ್/53/2012-13ರ ಟಿಪ್ಪಣಿ.

| ಹುದ್ದೆಯ ಹೆಸರು | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ | ನೇಮಕಾತಿ ಪ್ರಾಧಿಕಾರದ ಅಧಿಕಾರಿ |
|---|---|---|---|
| ಸ್ಪೆಷಲ್ ಗ್ಯಾಂಗ್‌ಮೆನ್<br>ಎಂ.ಸಿ. ಗ್ಯಾಂಗ್‌ಮೆನ್<br>ಎ.ಎಲ್.ಒ. ಗ್ಯಾಂಗ್‌ಮೆನ್<br>ಸೈನೊಸೀಸ್ ಗ್ಯಾಂಗ್‌ಮೆನ್<br>ಡಿಸ್‌ಇನ್‌ಫೆಕ್ಟೆಂಟ್ ಗ್ಯಾಂಗ್‌ಮೆನ್<br>ಸ್ವೀಪರ್ಸ್ (ಪೌರಕಾರ್ಮಿಕರು) | ನೇರ ನೇಮಕಾತಿ | 5ನೇ ತರಗತಿ ಉತ್ತೀರ್ಣ ಅಥವಾ 7ನೇ ತರಗತಿ ಅನುತ್ತೀರ್ಣ.<br>ಕನ್ನಡ ಭಾಷೆ ಪರಿಜ್ಞಾನವಿರಬೇಕು. | ಆಯುಕ್ತರು (ಕಾರ್ಪೊರೇಷನ್ ಕಾಯ್ದೆ 89ರಡಿಯಲ್ಲಿ) |

**ನಿರ್ಣಯ:**

*ಈ ಪ್ರಸ್ತಾವನೆಯಲ್ಲಿ ಪೌರಕಾರ್ಮಿಕರ ಹುದ್ದೆಯನ್ನು ನೇರ ನೇಮಕಾತಿ ಮೂಲಕ ತುಂಬುವ ಕುರಿತಂತೆ ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಅಗತ್ಯ ವಿದ್ಯಾರ್ಹತೆ ನಿಗಧಿ ಪಡಿಸಿರುವ ಕ್ರಮವು ಕಾನೂನಿನ ರೀತ್ಯ ಸಮಂಜಸವೇ ಎಂಬ ಬಗ್ಗೆ ಜರೂರಾಗಿ ಸಷ್ಟ ಅಭಿಪ್ರಾಯವನ್ನು ನೀಡಲು ಕಾನೂನು ಕೋಶದ ಮುಖ್ಯಸ್ಥರಿಗೆ ಕಳುಹಿಸುವುದು.*

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:25.02.2013 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಎನ್. ಶಾಂತಕುಮಾರಿ | ಸದಸ್ಯರು | ಉಪ ಆಯುಕ್ತರು(ಆಸ್ತಿಗಳು) ಪ್ರಭಾರ |
| 3 | ಕೆ.ರವೀಂದ್ರನ್ | ಸದಸ್ಯರು | ಸಹಾಯಕ ಆಯುಕ್ತರು(ಆಡಳಿತ-1) |
| 4 | ಜೆ.ಭುವನೇಶ್ವರಿ | ಸದಸ್ಯರು | ವಿಶೇಷ ಅಧಿಕಾರಿಗಳು |
| 5 | ಎಲ್.ನಾಗರತ್ನ | ಸದಸ್ಯರು | |
| 6 | ಎಸ್.ಎಂ. ಮುರುಗೇಶ್ ಮೊದಲಿಯಾರ್ | ಸದಸ್ಯರು | |
| 7 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | |
| 8 | ನಾಜಿನಿ ಬೇಗಂ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/23/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪಾಲಿಕೆಯ ಆಸ್ತಿಗಳನ್ನು ಅಂದರೆ ಉದ್ಯಾನವನ/ಆಟದ ಮೈದಾನ/ಖಾಲಿ ಜಾಗಗಳು/ಪಾಠಶಾಲೆಗಳು/ಆಸ್ಪತ್ರೆಗಳು/ಶೌಚಾಲಯಗಳು/ಗುತ್ತಿಗೆ ನೀಡಿರುವ ಆಸ್ತಿಗಳು ಇನ್ನು ಮುಂತಾದ ಪಾಲಿಕೆ ಆಸ್ತಿಗಳನ್ನು ಅಳತೆಮಾಡಿ ವಾರ್ಡ್‌ವಾರು ಆಸ್ತಿವಹಿಗಳನ್ನು ತೆರೆದು ಅವುಗಳಲ್ಲಿ ನಿರ್ದಿಷ್ಟವಾದ ಅಳತೆ, ವಿಸ್ತೀರ್ಣ ಹಾಗೂ ಚಕ್ಕುಬಂದಿ ಮುಂತಾದ ವಿವರಗಳನ್ನು ನಮೂದಿಸುವ ಉದ್ದೇಶಕ್ಕಾಗಿ 24 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ನಿವೃತ್ತ ಭೂ-ಪರ್ಯಾವೇಕ್ಷಕರನ್ನು ಸರ್ಕಾರದ ಆದೇಶದಂತೆ ಕೆ.ಎಂ.ಸಿ ಕಾಯ್ದೆ-1976 ನಿಯಮ 20(ಎ)ರನ್ವಯ ದಿನಾಂಕ:01.01.2008ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿವೃತ್ತ ಭೂಹೂಪಕರಿಗೆ ಮಾಸಿಕ ರೂ.10,000/- ಮತ್ತು ಪರ್ಯಾವೇಕ್ಷಕರಿಗೆ ಮಾಸಿಕ 12,000/-ರೂಗಳ ಸಂಚಿತ ವೇತನ ನಿಗಧಿಪಡಿಸಿ ನೇಮಕ ಮಾಡಿಕೊಳ್ಳಲಾಗಿತ್ತು.

ಪಾಲಿಕೆಯ ವ್ಯಾಪ್ತಿಯ 8 ವಲಯಗಳಲ್ಲಿ (198 ವಾರ್ಡ್‌ಗಳು) ಸುಮಾರು 5000 ಪಾಲಿಕೆ ಆಸ್ತಿಗಳು ಇರುವುದಾಗಿ ಅಂದಾಜಿಸಿ, ಇವುಗಳನ್ನು ಅಳತೆ ಮಾಡಿ ನಕ್ಷೆ ತಯಾರಿಸಲು ಪ್ರತಿ ವಲಯಕ್ಕೆ 2-3 ಜನ ಭೂಮಾಪಕರನ್ನು ನಿಯೋಜಿಸಿ ಎರಡು ವರ್ಷಗಳ ಅವಧಿಯಲ್ಲಿ ನಿವೃತ್ತ ಭೂ-

ಪರ್ಯಾವೇಕ್ಷಕರ ನೇತೃತ್ವದಲ್ಲಿ ಸುಮಾರು 2420 ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಿಸಿ, ನಕ್ಷೆಗಳನ್ನು ತಯಾರಿಸಲಾಗಿರುತ್ತದೆ. ಇದರ ಜೊತೆಗೆ ಇದೇ ಅವಧಿಯಲ್ಲಿ ಚುನಾವಣಾ ಮಾರ್ಗಸೂಚಿ ನಕ್ಷೆಗಳನ್ನು ತಯಾರು ಮಾಡಿಸಲಾಗಿದೆ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ 16 ಕೆರೆಗಳನ್ನು ಅಳತೆ ಮಾಡಿಸಿ ಸುಮಾರು 69 ಎಕರೆ 06 ಗುಂಟೆ ಒತ್ತುವರಿ ಪ್ರದೇಶವನ್ನು ಪತ್ತೆ ಮಾಡಿಸಲಾಗಿದೆ ಹಾಗೂ ಮಿಲ್ಲರ್‌ಟ್ಯಾಂಕ್ ರಸ್ತೆ ಏರಿಯಾದಲ್ಲಿ ಇರುವ ಬಿಳೇಕಹಳ್ಳಿ ಗ್ರಾಮದ ಸ.ನಂ:16, 18, 19ರ ಗಡಿಗಳನ್ನು ಗುರ್ತುಮಾಡಿಸಿ 56 ಬ್ಲಾಕುಗಳ ನಕ್ಷೆಗಳನ್ನು ತಯಾರು ಮಾಡಿಸಲಾಗಿದೆ ಮತ್ತು ಮಾನ್ಯ ಉಚ್ಛನ್ಯಾಯಾಲಯದ ಸೂಚನೆಗಳಂತೆ ಯಲಹಂಕ ವಲಯದ ನ್ಯಾಯಾಂಗ ಬಡಾವಣೆಯಲ್ಲಿರುವ ಸಿ.ಎ. ನಿವೇಶನ, ಉದ್ಯಾನವನ ಹಾಗೂ ಇತರೆ ಜಾಗಗಳನ್ನು ಅಳತೆ ಮಾಡಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ಇವರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗಿರುತ್ತದೆ. ಈ ಎರಡು ವರ್ಷಗಳ ಪ್ರಾರಂಭದಲ್ಲಿ 24 ಜನ ನಿವೃತ್ತ ಭೂಮಾಪಕರು ಕರ್ತವ್ಯಕ್ಕೆ ಹಾಜರಾಗಿದ್ದರೂ ಸಹ ಇವರ ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ಆಗಿಂದ್ದಾಗ್ಗೆ ಕರ್ತವ್ಯವನ್ನು ಬಿಟ್ಟು ಹೋಗಿದ್ದು, ಈ ಅವಧಿಯಲ್ಲಿ ಸರಾಸರಿ 15–16 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ನಿವೃತ್ತ ಭೂ–ಪರ್ಯಾವೇಕ್ಷಕರು ಕರ್ತವ್ಯ ನಿರ್ವಹಿಸಿರುತ್ತಾರೆ.

ಬಾಕಿ ಉಳಿದಿರುವ ಪಾಲಿಕೆ ಆಸ್ತಿಗಳ ಅಳತೆ ಕಾರ್ಯಗಳನ್ನು ಪೂರ್ಣಗೊಳಿಸಲು ಇವರ ಸೇವೆಯು ಅತ್ಯವಶ್ಯಕವಾಗಬೇಕಾದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದಂತೆ ಇವರ ಸೇವೆಯನ್ನು ದಿನಾಂಕ:01.01.2010 ರಿಂದ 31.12.2010ರ ವರೆವಿಗೆ ಮತ್ತು ದಿನಾಂಕ:01.01.2011 ರಿಂದ 31.12.2011ರ ವರೆವಿಗೆ ವಿಸ್ತರಿಸಲಾಗಿರುತ್ತದೆ. ಈ ಎರಡು ವರ್ಷಗಳ ಅವಧಿಯಲ್ಲಿ ಕ್ರಮವಾಗಿ ಸರಾಸರಿ 12 ರಿಂದ 15 ಜನರಂತೆ ಭೂಮಾಪಕರು ಹಾಗೂ 4 ಜನ ಭೂಪರ್ಯಾವೇಕ್ಷಕರು ಕಾರ್ಯನಿರ್ವಹಿಸಿದ್ದು, 1892 ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಿ ನಕ್ಷೆ ತಯಾರಿಸಿರುತ್ತಾರೆ. ಈ ಪಾಲಿಕೆ ಆಸ್ತಿಗಳ ಅಳತೆ ಕೆಲಸದ ಜೊತೆಗೆ ಕಸವಿಲೇವಾರಿಗಾಗಿ ಪಾಲಿಕೆಗೆ ಹಸ್ತಾಂತರಗೊಂಡಿರುವ 4 ಸ್ಥಳಗಳಲ್ಲಿನ 370 ಎಕರೆ 5 ಗುಂಟೆ ಪ್ರದೇಶದ ಅಳತೆ ಮತ್ತು 8 ವಲಯಗಳ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳ ಹಾಗೂ ರಾಜಕಾಲುವೆಗಳ ಅಳತೆ ಮತ್ತು ರಸ್ತೆ ಅಗಲೀಕರಣಕ್ಕಾಗಿ ಭೂಸ್ವಾಧೀನ ಪ್ರದೇಶಗಳ ಅಳತೆ, ಖಾತೆ ಬದಲಾವಣೆಗಳಲ್ಲಿ ವಿವಾದಾಸ್ಪದವಾದ ಪ್ರಕರಣಗಳ ಅಳತೆ ಮುಂತಾದ ಕಾರ್ಯಗಳಿಗೆ ವಲಯ ಕಛೇರಿಯ ಅಧಿಕಾರಿಗಳು ಉಪಯೋಗಿಸಿಕೊಂಡಿರುತ್ತಾರೆ.

ಡಿಸೆಂಬರ್–2011ರ ಅಂತ್ಯಕ್ಕೆ ನಿವೃತ್ತಿ ಭೂಮಾಪನ ಸಿಬ್ಬಂದಿಯಿಂದ ಒಟ್ಟು 4312 ಪಾಲಿಕೆ ಅಸ್ತಿಗಳನ್ನು ಮೇಲೆ ವಿವರಿಸಿರುವ ಇತರೆ ಅಳತೆ ಕೆಲಸಗಳ ಜೊತೆಗೆ ಅಳತೆ ಮಾಡಿಸಿದ್ದು, ಇವುಗಳ ನಕ್ಷೆ ಹಾಗೂ ಇತರೆ ವಿವರಗಳನ್ನು ಕಛೇರಿಯಲ್ಲಿ ವಾರ್ಡ್‌ವಾರು ವಹಿಗಳಲ್ಲಿ ನಮೂದಿಸಲಾಗುತ್ತಿದೆ.

ಖಾಯಂ ಭೂಮಾಪನ ಸಿಬ್ಬಂದಿಯ ತೀವ್ರ ಕೊರತೆಯಿರುವ ಕಾರಣ, 8 ವಲಯ ಅಧಿಕಾರಿಗಳು ತಮ್ಮ ಕಛೇರಿಯ ದಿನನಿತ್ಯದ ತುರ್ತು ಕಾರ್ಯಗಳಿಗೆ ನಿವೃತ್ತ ಭೂಮಾಪನ

ಸಿಬ್ಬಂದಿಯ ಸೇವೆಯನ್ನು ಉಪಯೋಗಿಸಿಕೊಳ್ಳುತ್ತಿರುತ್ತಾರೆ ಹಾಗೂ ಹಾಲೀ ನಿವೃತ್ತ ಭೂಮಾಪನ ಸಿಬ್ಬಂದಿಯು ಅಗತ್ಯಕ್ಕಿಂತ ಕಮ್ಮಿ ಇದ್ದು, ಈಗ ಕೇವಲ 12 ಜನ ನಿವೃತ್ತ ಭೂಮಾಪಕರು ಹಾಗೂ 3 ಜನ ನಿವೃತ್ತ ಭೂ ಪರ್ಯಾವೇಕ್ಷಕರು ಮಾತ್ರ ಕೆಲಸ ನಿರ್ವಹಿಸುತ್ತಿರುತ್ತಾರೆ.

ನಿವೃತ್ತ ಭೂಮಾಪನ ಸಿಬ್ಬಂದಿಯ ನೇಮಕಾತಿ ಅವಧಿಯು ದಿನಾಂಕ:31.12.2011ಕ್ಕೆ ಮುಕ್ತಾಯಗೊಂಡಿರುತ್ತದೆ. ಆದರೆ, ಇನ್ನು ಸಮಾರು 1000ಕ್ಕೂ ಹೆಚ್ಚಿನ ಪಾಲಿಕೆ ಆಸ್ತಿಗಳ ಅಳತೆ ಕಾರ್ಯ ಬಾಕಿ ಇರುತ್ತದೆ ಹಾಗೂ ಈ ಕೆಳಕಂಡ ಕಾರ್ಯಗಳು ಇನ್ನೂ ನಿರ್ವಹಿಸಬೇಕಾಗಿರುವುದರಿಂದ, ಇವರ ಸ್ಲೇವೆಯನ್ನು ದಿನಾಂಕ:01.01.2012 ರಿಂದ ಅನ್ವಯವಾಗುವಂತೆ ಪುನಃ 2 ವರ್ಷಗಳವರೆಗೆ ವಿಸ್ತರಿಸುವುದು ಅತ್ಯವಶ್ಯಕವಾಗಿರುತ್ತದೆ.

1. ಸುಮಾರು 1000ಕ್ಕೂ ಹೆಚ್ಚಿನ ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಲು ಬಾಕಿ ಇರುತ್ತದೆ ಹಾಗೂ ಆಸ್ತಿವಹಿಗಳಲ್ಲಿ ದಾಖಲಿಸುವ ಕಾರ್ಯ ಪ್ರಗತಿಯಲ್ಲಿರುತ್ತೆ.
2. ಹಾಲಿ ಇರುವ 12 ಜನ ನಿವೃತ್ತ ಭೂ-ಮಾಪಕರುಗಳನ್ನು ಎಂಟು ವಲಯ ಕಛೇರಿಗಳಿಗೆ ತಲಾ ಒಬ್ಬರು ಅಥವಾ ಇಬ್ಬರಂತೆ ನಿಯೋಜಿಸಲಾಗಿದ್ದು, ವಲಯ ಕಛೇರಿಯ ಅಧಿಕಾರಿಗಳು ಇವರ ಸೇವೆಯನ್ನು ಪಾಲಿಕೆ ಆಸ್ತಿಗಳ ಅಳತೆ ಜೊತೆಗೆ ರಾಜಕಾಲುವೆ ಅಳತೆ, ಸ್ಲಂ ಅಳತೆ, ನ್ಯಾಯಾಲಯಕ್ಕೆ ಸಂಬಂಧಿಸಿದ ವಿವಾದಗಳು ಹಾಗೂ ಇತರೆ ಅತ್ಯವಶ್ಯಕವಾದ ತುರ್ತು ಕಾರ್ಯಗಳಿಗೆ ಉಪಯೋಗಿಸಿಕೊಳ್ಳುತ್ತಿರುತ್ತಾರೆ.
3. ಅಳತೆಯಾಗಿರುವ ಆಸ್ತಿಗಳ ಪೈಕಿ ಈಗಾಗಲೇ ಉದ್ಯಾನವನ, ಆಟದ ಮೈದಾನ ಮತ್ತು ಖಾಲಿಜಾಗಗಳಿಗೆ ಸಂಬಂಧಿಸಿದಂತೆ ಒಟ್ಟು 1066 ಆಸ್ತಿಗಳನ್ನು ಮೊದಲ ಹಂತವಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಇನ್ನೂ ಇಂತಹ ಸುಮಾರು 550 ಆಸ್ತಿಗಳನ್ನು ಪ್ರಕಟಣೆಗೆ ಕಳುಹಿಸಬೇಕಾಗಿರುತ್ತದೆ. ಕರ್ನಾಟಕ ಉದ್ಯಾನವನ/ಆಟದ ಮೈದಾನ ಮತ್ತು ಖಾಲಿ ಜಾಗಗಳ (ಸಂರಕ್ಷಣೆ ಮತ್ತು ನಿಯಂತ್ರಣ) ಕಾಯ್ದೆ–1985ರ ಅಡಿಯಲ್ಲಿ ಇವುಗಳನ್ನು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಬೇಕಾಗಿದೆ.
4. ಹಾಲಿ ಈಗ ಅಳತೆ ಮಾಡಿರುವ ಆಸ್ತಿಗಳನ್ನು ಹಿಂದಿನ ಆಸ್ತಿದಾಖಲೆಗಳೊಂದಿಗೆ ಸಮನ್ವಯ ಮಾಡಿ ಕೈಬಿಟ್ಟಿರುವ ಆಸ್ತಿಗಳನ್ನು ಗುರ್ತಿಸಬೇಕಾಗಿದೆ.
5. ಅಳತೆಯಾಗಿರುವ ಆಸ್ತಿಗಳ ಪೈಕಿ 400 ಆಸ್ತಿಗಳಿಗೆ ಪಿ.ಐ.ಡಿ ಸಂಖ್ಯೆ ನೀಡಲಾಗಿದ್ದು, ಉಳಿದ ಆಸ್ತಿಗಳಿಗೆ ಮಾಹಿತಿ ಪಡೆದು ಪಿ.ಐ.ಡಿ ಸಂಖ್ಯೆಯನ್ನು ಆಸ್ತಿಗಳ ವಹಿಗಳಲ್ಲಿ ದಾಖಲಿಸಬೇಕಾಗಿದೆ.
6. ಮೇಲ್ಕಂಡ ಕಾರ್ಯಗಳ ಜೊತೆಗೆ ಮಳೆ ನೀರು ಚರಂಡಿ, ರಸ್ತೆ ಮುಂತಾದ ಜಾಗಗಳಲ್ಲಿ ಒತ್ತುವರಿಗಳನ್ನು ಗುರ್ತಿಸಿ, ತೆರವುಗೊಳಿಸುವ ಕಾರ್ಯಕ್ಕೆ ಭೂಮಾಪಕರ ಸೇವೆಯು ಅತ್ಯವಶ್ಯಕವಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

7. ಪಾಲಿಕೆ ಆಸ್ತಿಗಳಿಗೆ ಸಂಬಂಧಿಸಿದಂತೆ ಹಲವಾರು ಭೂ-ವಿವಾದಗಳು ನ್ಯಾಯಾಲಯಗಳಲ್ಲಿ ದಾಖಲಾಗಿದ್ದು, ಇವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ನ್ಯಾಯಾಲಯಗಳಿಗೆ ಸಲ್ಲಿಸಲು ನಿವೃತ್ತ ಭೂಮಾಪಕರ ಸೇವೆಯ ಅವಶ್ಯಕವಾಗಿರುತ್ತದೆ.
8. ಇತ್ತೀಚಿಗೆ ಮಾಹಿತಿ ಕಾಯ್ದೆ ಹಕ್ಕಿನ ಅಡಿಯಲ್ಲಿ ಸಾರ್ವಜನಿಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ತಿಗಳಿಗೆ ಸಂಬಂಧಿಸಿದಂತೆ ಮಾಹಿತಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳನ್ನು ನೀಡುತ್ತಿದ್ದು, ಇವುಗಳನ್ನು ತಯಾರಿಸಿ ಕಾಲಮಿತಿಯೊಳಗೆ ಮಾಹಿತಿ ನೀಡಲು ಭೂಮಾಪಕರ ಸೇವೆಯು ಅತ್ಯವಶ್ಯಕವಾಗಿರುತ್ತದೆ.

ಮೇಲೆ ವಿವರಿಸಿರುವ ವಿವರಿಸಿರುವ ಹಲವಾರು ಕಾರ್ಯಗಳಿಗೆ ನಿವೃತ್ತ ಭೂ-ಪರ್ಯಾವೇಕ್ಷಕರು/ಭೂಮಾಪಕರ ಸೇವೆಯು ಅತ್ಯವಶ್ಯಕವಾಗಿ ಬೇಕಾಗಿರುವ ಕಾರಣದಿಂದ 24 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ಭೂ-ಪರ್ಯಾವೇಕ್ಷಕರ ಗುತ್ತಿಗೆ ಸೇವೆಯ ಅವಧಿಯನ್ನು ದಿನಾಂಕ:01.01.2012ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಮುಂದುವರೆಸಿ ಕೆ.ಎಂ.ಸಿ.ಕಾಯ್ದೆ-1976ರ ನಿಯಮ 20(ಎ) ಅನ್ವಯ ಮಾಸಿಕ ಸಂಚಿತ ವೇತನದ ಆಧಾರದ ಮೇಲೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:26.06.2012ರ ಸಂಖ್ಯೆ:ಅ.ಆ(ಆಸ್ತಿ)ಇಸಿ/ಪಿಆರ್/40/2007-08ರ ಟಿಪ್ಪಣಿ.

**ನಿರ್ಣಯ:-**

*ದಿನಾಂಕ:22/12/2012ರ ಅವಲೋಕನೆಗೆ ಸಂಬಂಧಿಸಿದಂತೆ ಆಯುಕ್ತರು ದಿನಾಂಕ:08/02/2013ರಂದು ನೀಡಿರುವ ವಿವರವಾದ ವರದಿಯನ್ನು ಅವಗಾಹಿಸುತ್ತಾ ಸರ್ಕಾರದ ನಿಯಮಗಳ ಅನುಸಾರ ನಿವೃತ್ತ ಭೂಮಾಪಕರ/ಭೂ-ಪರ್ಯಾವೇಕ್ಷಕರ ವಯೋಮಿತಿಯ ಅನುಗುಣವಾಗಿ ಸದರಿಯವರುಗಳ ಸೇವೆಯನ್ನು ದಿನಾಂಕ:01/01/2012ರಿಂದ ಜಾರಿಗೆ ಬರುವಂತೆ 2 ವರ್ಷಗಳ ಅವಧಿಗೆ ಮುಂದುವರೆಸಲು ಸಮಿತಿಯು ತೀರ್ಮಾನಿಸಿದೆ.*

## ವಿಷಯ ಸಂಖ್ಯೆ: ಸಿಆಸುಸ್ಥಾಸ/33/2012-13

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಶ್ರಿ. ಎನ್. ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರು ಮನವಿ ಸಲ್ಲಿಸಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಧಿಕ ಕಾನೂನು ಸಲಹೆಗಾರನಾಗಿ ಜಿಲ್ಲಾ ನ್ಯಾಯಾಧೀಶರ ಸೂಪರ್ ಟೈಂ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸಿ ದಿನಾಂಕ:30.06.2005ರಲ್ಲಿ ನಿವೃತ್ತಿ ಹೊಂದಿದ್ದು, ನಿವೃತ್ತಿಯಾಗುವ ಅವಧಿಯಲ್ಲಿ ಬೆಂಗಳೂರು

ಸಂಪೂರ್ಣ ಮಾಹಿತಿಯನ್ನು ಸಿದ್ಧಗೊಳಿಸಿರುತ್ತೇನೆ. ಅದರಲ್ಲಿ ವಿಷಯವಾರು, ನ್ಯಾಯಾಲಯಗಳವಾರು, ವಾರ್ಷಿಕವಾರು, ನ್ಯಾಯವಾದಿಗಳವಾರು ಪ್ರತ್ಯೇಕಿಸಿ ಯಾವುದೇ ಮಾಹಿತಿಯು ಕ್ಷಣಾರ್ಧದಲ್ಲಿ ಲಭ್ಯವಾಗುವಂತೆ ತಯಾರಿಸಿ ಗಣಕೀಕರಣಗೊಳಿಸಿರುತ್ತೇನೆ. ಮುಖ್ಯವಾಗಿ ನಗರ ಪಾಲಿಕೆ ಸ್ವತ್ತುಗಳ ಬಗ್ಗೆ ಅತಿ ಹೆಚ್ಚು ಮುತುವರ್ಜಿ ವಹಿಸಿ ನಗರ ಪಾಲಿಕೆ ಸ್ವತ್ತುಗಳನ್ನು ಸಂರಕ್ಷಿಸುವಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿರುತ್ತೇನೆ. ಜೊತೆಗೆ ನ್ಯಾಯಾಲಯಗಳ ಆದೇಶವನ್ನು ಪಾಲನೆ ಮಾಡುವುದು ಅಥವಾ ಮೇಲ್ಮನವಿ ಸಲ್ಲಿಸುವುದರೊಂದಿಗೆ ನ್ಯಾಯಾಲಯ ನಿಂದನೆ ಪ್ರಕರಣಗಳು ಆಗದಂತೆ ನೋಡಿಕೊಳ್ಳಲಾಗುತ್ತಿತ್ತು. ದಿನಾಂಕ:16.01.2007ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಏಳು ಸಿ.ಎಂ.ಸಿ ಪ್ರದೇಶಗಳು, ಒಂದು ಪುರಸಭೆ, ಹೊಸ ಬಿ.ಡಿ.ಎ. ಬಡಾವಣೆ ಮತ್ತು 112 ಹಳ್ಳಿಗಳನ್ನು ಸೇರಿಸಿಕೊಳ್ಳಲಾಗಿರುತ್ತದೆ. ಈ ಪ್ರದೇಶದಲ್ಲಿ ಬರುವ ಸರ್ಕಾರಿ ಸ್ವತ್ತುಗಳನ್ನು ಗುರುತಿಸಿ ಅವುಗಳನ್ನು ನಗರ ಪಾಲಿಕೆ ಆಸ್ತಿ ಪುಸ್ತಕದಲ್ಲಿ ದಾಖಲಿಸಿಕೊಳ್ಳಲು ಕ್ರಮ ತೆಗೆದುಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ ಹಾಗೂ ಈ ಪ್ರದೇಶಗಳಲ್ಲಿನ ಹೊಸ ದಾವೆ/ಮೊಕದ್ದಮೆಗಳನ್ನು ಕೂಡಾ ಕ್ರೋಢೀಕರಿಸಿ ಗಣಕೀಕರಣಗೊಳಿಸಬೇಕಾಗಿರುತ್ತದೆ. ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಮಹಾನಗರ ಪಾಲಿಕೆಯಲ್ಲಿ ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷಗಳ ಕಾಲ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿರುತ್ತಾರೆ.

ಕಾನೂನು ಕೋಶದ ಮುಖ್ಯಸ್ಥರು ದಿನಾಂಕ:29.06.2012ರಂದು ನೀಡಿರುವ ಅಭಿಪ್ರಾಯ ವರದಿಯಲ್ಲಿ ಸದರಿ ನಿವೃತ್ತ ಅಧಿಕಾರಿಯವರು ದಿನಾಂಕ:21.05.2012ರಂದು ಅರ್ಜಿ ಸಲ್ಲಿಸಿ ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಕಾನೂನು ವಿಭಾಗದ ಸಲಹೆಗಾರರನ್ನಾಗಿ ನೇಮಿಸಲು ಕೋರಿಕೊಂಡಿರುತ್ತಾರೆ. ಪಾಲಿಕೆಯಲ್ಲಿ ಸಿಬ್ಬಂದಿ ಕೊರತೆ ಹೆಚ್ಚಾಗಿದ್ದು ದಿನೇ ದಿನೇ ಪ್ರಕರಣಗಳು ಹೆಚ್ಚಾಗಿರುತ್ತವೆ. ಈ ಸಂಬಂಧ 1977 ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ 20ರನ್ವಯ ಸರ್ಕಾರದ ಪೂರ್ವಾನ್ವಯ ಮಂಜೂರಾತಿ ಪಡೆದು 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದ ಮೇರೆಗೆ ಸದರಿ ನಿಯಮದಡಿ ಸದರಿ ನಿವೃತ್ತ ಅಧಿಕಾರಿಯವರನ್ನು ನೇಮಿಸಿಕೊಳ್ಳಲು ಕ್ರಮವಹಿಸಬಹುದಾಗಿರುತ್ತದೆಯೆಂದು ಅಭಿಪ್ರಾಯ ನೀಡಿರುತ್ತಾರೆ.

ಕಾನೂನು ಕೋಶದ ಮುಖ್ಯಸ್ಥರು ದಿನಾಂಕ:29.06.2012ರಂದು ನೀಡಿರುವ ಅಭಿಪ್ರಾಯದನ್ವಯ ಶ್ರೀ. ಎನ್.ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ಒಂದು ವರ್ಷದ ಅವಧಿಗೆ ಸಂಚಿತ ವೇತನದ ಮೇಲೆ ಪಾಲಿಕೆಯ ಕಾನೂನು ವಿಭಾಗದಲ್ಲಿ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸಲು ದಿನಾಂಕ:28.08.2012ರ ಆದೇಶದಂತೆ ನೇಮಿಸಲಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಷರತ್ತುಗಳು:-

1. ಸದರಿಯವರನ್ನು ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಕೆ.ಸಿ.ಎಸ್.ಆರ್. ನಿಯಮ ಅನ್ವಯಿಸುವುದಿಲ್ಲ.
2. ಸದರಿಯವರನ್ನು ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಮಾತ್ರ ನೇಮಕ ಮಾಡಿಕೊಳ್ಳಲಾಗಿರುತ್ತದೆ.
3. ಸದರಿಯವರು ಮಾನ್ಯ ಆಯುಕ್ತರು ರವರು ಸೂಚಿಸುವ ಎಲ್ಲಾ ಕೆಲಸಗಳನ್ನು ನಿರ್ವಹಿಸತಕ್ಕದ್ದು.
4. ಸದರಿಯವರ ಸೇವೆಯು ಪಾಲಿಕೆಗೆ ಅಗತ್ಯವಿಲ್ಲವೆಂದು ಕಂಡುಬಂದರೆ ಯಾವುದೇ ನೋಟೀಸ್ ನೀಡದೆ ಸೇವೆಯಿಂದ ಬಿಡುಗಡೆ ಮಾಡಲಾಗುತ್ತದೆ.
5. ಸದರಿಯವರು ಯಾವುದೇ ರೀತಿಯ ಹಣಕಾಸಿನ ಕಡತಗಳಿಗೆ ಅನುಮೋದನೆ ಅಥವಾ ಸಹಿ ಮಾಡುವ ಹಾಗೂ ಶಾಸನಬದ್ಧ ಅಧಿಕಾರವನ್ನು ಹೊಂದಿರುವುದಿಲ್ಲ.

ನಂತರದಲ್ಲಿ ಶ್ರೀ. ಎನ್. ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರನ್ನು ಪಾಲಿಕೆಯಲ್ಲಿ ಕಾನೂನು ಸಲಹೆಗಾರರಾಗಿ ನೇಮಿಸಿಕೊಂಡಿರುವಂತೆ ಇವರಿಗೆ ಈ ಕಛೇರಿಯ ದಿನಾಂಕ:21.12.2012ರ ಆದೇಶದಂತೆ ಮಾಹೆಯಾನ ರೂ.30,000/-(ಮೂವತ್ತು ಸಾವಿರ)ಗಳ ಸಂಚಿತ ವೇತನವನ್ನು ನಿಗಧಿಪಡಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ. ಎನ್. ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರನ್ನು ಪಾಲಿಕೆಯಲ್ಲಿ ಒಂದು ವರ್ಷದ ಅವಧಿಗೆ ಕಾನೂನು ಸಲಹೆಗಾರರಾಗಿ ಮಾಹೆಯಾನ ರೂ.30,000/- (ಮೂವತ್ತು ಸಾವಿರ)ಗಳ ಸಂಚಿತ ವೇತನದ ಮೇಲೆ ನೇಮಿಸಿಕೊಂಡಿರುವ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ಕೋರಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:17.01.2013ರ ಸಂಖ್ಯೆ:ಬಿ12(3ಎ)/ಪಿಆರ್/31/2012-13ರ ಟಿಪ್ಪಣಿ, ಸದರಿ ಟಿಪ್ಪಣಿಯನ್ನು ಒಪ್ಪಿರುವ ದಿನಾಂಕ:11.02.2013ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯ.

**ನಿರ್ಣಯ:**

*ಈ ಕೆಳಕಂಡ ನ್ಯೂನತೆಗಳಿಗೆ ಸಂಬಂಧಿಸಿದಂತೆ ವಿವರಣೆ ನೀಡುವುದು.*

*(1) ದಿನಾಂಕ:28.08.2012ರಂದು ಕಛೇರಿ ಆದೇಶ ಹೊರಡಿಸುವ ಮುನ್ನ ಸಮಿತಿಯ ಅಭಿಪ್ರಾಯ ಪಡೆಯುವ ಅವಶ್ಯಕತೆ ಇಲ್ಲವೆ?*

*(2) ಸದರಿಯವರಿಗೆ ಸಂಚಿತ ವೇತನವನ್ನು ಕೆ.ಸಿ.ಎಸ್.ಆರ್. ನಿಯಮ 313 ಬಿ(1) ರೀತ್ಯಾ ಪಾವತಿಸಲಾಗುತ್ತಿದೆಯೆ ಹಾಗೂ ಇವರಿಗೆ ಬೇರೆ ಯಾವ ವಿಧವಾದ ಸೌಲಭ್ಯಗಳನ್ನು ನೀಡಲಾಗುತ್ತಿದೆ ವರದಿ ನೀಡಿ.*

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

(3) ಈಗಾಗಾಲೇ 6 ತಿಂಗಳುಗಳ ಅವಧಿಯು ಮುಗಿಯಲಿದ್ದು, ಸಮಿತಿಯ ಹಾಗೂ ಪಾಲಿಕೆಯ ತೀರ್ಮಾನದ ನಂತರ ಸರ್ಕಾರದ ಅನುಮತಿಯು ಅತ್ಯವಶ್ಯಕವಿದ್ದು, ಒಂದು ಪಕ್ಷ ಸರ್ಕಾರವು ಈ ಹಿಂದೆ ಶ್ರೀ. ಎನ್.ಎಸ್. ಗುಂಡಪ್ಪ, ನಿವೃತ್ತ ನೌಕರರ ನಿಯೋಜನೆಯನ್ನು ತಿರಸ್ಕರಿಸಿದಂತೆ ಇವರ ಪ್ರಸ್ತಾವನೆಯನ್ನು ತಿರಸ್ಕರಿಸಿದಲ್ಲಿ ಇದರಿಂದ ಉಂಟಾಗುವ ನಷ್ಟ ಹಾಗೂ ಇತರೆ ಪ್ರಕ್ರಿಯೆಗಳಿಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

(4) ಸರ್ಕಾರದ ನಿಯಮಗಳ ಅನುಸಾರ ನಿವೃತ್ತ ಅಧಿಕಾರಿಗಳ ವಯೋಮಿತಿ ಅನುಸಾರವಾಗಿ ಮರು ನೇಮಕಾತಿ ಮಾಡಿಕೊಳ್ಳಲಾಗಿದೆಯೇ?

**ವಿಷಯ ಸಂಖ್ಯೆ: ಸಿಆಸುಸ್ಥಾಸ/34/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಶ್ರೀ. ಎ. ಪಿಚ್ಚಮುತ್ತು, ಇವರು ಸೇವೆಯಲ್ಲಿದ್ದಾಗ, ದಿನಾಂಕ:12.06.2012ರಂದು ಮನವಿ ಸಲ್ಲಿಸಿ ಪಾಲಿಕೆಯ ಕಾನೂನು ವಿಭಾಗದಲ್ಲಿ ಉಪ ಕಾನೂನು ಅಧಿಕಾರಿ ಆಗಿ ಕಾರ್ಯನಿರ್ವಹಿಸುತ್ತಿದ್ದು, ಪಾಲಿಕೆಯಲ್ಲಿ ಸುಮಾರು 35 ವರ್ಷಗಳಿಂದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದು, ದಿನಾಂಕ:31.08.2012ರಂದು ವಯೋಮಿತಿಗನುಗುಣವಾಗಿ ನಿವೃತ್ತಿ ಹೊಂದಲಿರುವುದರಿಂದ, ಸರ್ಕಾರದ ಆದೇಶದಂತೆ ನಿವೃತ್ತ ಅಧಿಕಾರಿಗಳನ್ನು 5 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ನಿಯೋಜಿಸಿಕೊಳ್ಳಲು ಅವಕಾಶವಿರುವ ಹಿನ್ನೆಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಕೋರಿರುತ್ತಾರೆ.

ಈ ಸಂಬಂಧವಾಗಿ, ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯ ವರದಿಯಲ್ಲಿ ಪ್ರಸ್ತುತ ಪಾಲಿಕೆಯ ಕಾನೂನು ವಿಭಾಗದಲ್ಲಿ ಹಿರಿಯ ಅಧಿಕಾರಿಗಳು ವಯೋನಿವೃತ್ತಿ ಹೊಂದಿರುವುದರಿಂದ, ಕಾನೂನು ವಿಭಾಗದಲ್ಲಿ ಅನುಭವವಿರುವ ಹಿರಿಯ ಅಧಿಕಾರಿಗಳ ಕೊರತೆ ಇರುವ ಹಿನ್ನೆಲೆಯಲ್ಲಿ ಹಾಗೂ ನಿವೃತ್ತ ಅಧಿಕಾರಿಗಳನ್ನು 5 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಸರ್ಕಾರದ ಆದೇಶದಂತೆ ಅವಕಾಶವಿರುವುದರಿಂದ, ಪಾಲಿಕೆಯ ಕಾನೂನು ವಿಭಾಗದ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ನಿವೃತ್ತಿಯ ನಂತರ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಲುಕೊಳ್ಳಲು ಹಾಗೂ ನಿಯಮಾನುಸಾರ ಪರಿಶೀಲಿಸಬಹುದಾಗಿದೆಯೆಂದು ಅಭಿಪ್ರಾಯ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಶ್ರೀ. ಎ. ಪಿಚ್ಚಮುತ್ತು, ನಿವೃತ್ತ ಉಪ ಕಾನೂನು ಅಧಿಕಾರಿ, ಇವರನ್ನು 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ 20(ಎ)ರನ್ವಯ ಪಾಲಿಕೆಯ ಭೂಸ್ವಾಧೀನ ಶಾಖೆ, ಆಸ್ತಿ ಶಾಖೆ ಮತ್ತು ಜಾಹೀರಾತು ಶಾಖೆಗೆ ಸಂಬಂಧಿಸಿದಂತೆ ಎಲ್ಲಾ ನ್ಯಾಯಾಲಯ ಪ್ರಕರಣಗಳಲ್ಲಿ ಕಾನೂನು ಸಲಹೆ, ಕಂಡಿಕೆವಾರು ಉತ್ತರಗಳನ್ನು ತಯಾರಿಸುವ ಹಾಗೂ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು, ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ನೇಮಿಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:17.01.2013ರ ಸಂಖ್ಯೆ:ಬಿ12(3ಎ)/ಎಲ್‌ಪಿಆರ್/33/2012-13ರ ಟಿಪ್ಪಣಿ, ಸದರಿ ಟಿಪ್ಪಣಿಯನ್ನು ಒಪ್ಪಿರುವ ದಿನಾಂಕ:11.02.2013ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯ.

**ನಿರ್ಣಯ:**

*ಈ ಕೆಳಕಂಡ ಮಾರ್ಪಾಡಿನೊಂದಿಗೆ ದಿನಾಂಕ:11.02.2013ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.*

*(1) ಸದರಿಯವರಿಗೆ ಸಂಚಿತ ವೇತನವನ್ನು ಕೆ.ಸಿ.ಎಸ್.ಆರ್. ನಿಯಮ 313 ಬಿ(1) ರೀತ್ಯಾ ಪಾವತಿಸತಕ್ಕದ್ದು.*

*(2) ಸರ್ಕಾರದ ನಿಯಮಗಳ ಅನುಸಾರ ನಿವೃತ್ತ ಅಧಿಕಾರಿಗಳ ವಯೋಮಿತಿ ಅನುಸಾರವಾಗಿ ಮರು ನೇಮಕಾತಿ ಮಾಡಿಕೊಳ್ಳತಕ್ಕದ್ದು.*

**ವಿಷಯ ಸಂಖ್ಯೆ: ಸಿಆಸುಸ್ಥಾಸ/35/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಡಾ॥ ಎ.ಎಸ್. ಬಾಲಸುಂದರ್, ಉಪ ಆರೋಗ್ಯಾಧಿಕಾರಿ, ಪೂರ್ವ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರನ್ನು ಮುಖ್ಯ ಆರೋಗ್ಯಾಧಿಕಾರಿಗಳ ಈ ಕೆಳಕಂಡ ವರದಿಯಂತೆ "ಪಾಲಿಕೆಯಲ್ಲಿ 06 ರೆಫೆರಲ್ ಆಸ್ಪತ್ರೆಗಳು ಮತ್ತು 23 ಹೆರಿಗೆ ಆಸ್ಪತ್ರೆಗಳಿದ್ದು, ಇಲ್ಲಿ ಸಂತಾನಹರಣ ಚಿಕಿತ್ಸೆ, ಸಿಸೇರಿಯನ್ ಚಿಕಿತ್ಸೆ ಹಾಗೂ ಸ್ತ್ರೀ ರೋಗಕ್ಕೆ ಸಂಬಂಧಪಟ್ಟ ಅನೇಕ ರೀತಿಯ ಶಸ್ತ್ರ ಚಿಕಿತ್ಸೆಗಳನ್ನು ಮಾಡಲಾಗುತ್ತಿದೆ ಮತ್ತು ಈ ಎಲ್ಲಾ ಶಸ್ತ್ರಚಿಕಿತ್ಸೆಗಳಿಗೆ ಅರವಳಿಕೆ ತಜ್ಞರ (Anesthetist) ಅವಶ್ಯಕತೆ ಇರುತ್ತದೆ. ಪಾಲಿಕೆಯ ಖಾಯಂ ವೈದ್ಯರುಗಳಲ್ಲಿ ಪ್ರಸ್ತುತ ಕೇವಲ ಇಬ್ಬರು ಅರವಳಿಕೆ ತಜ್ಞರು ಮಾತ್ರ ಇದ್ದು, ಉಳಿದವರು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ 2009ನೇ ಸಾಲಿನಲ್ಲಿ ಪಾಲಿಕೆಯ ವೈದ್ಯರುಗಳಿಗೆ ರಾಜೀವ್‌ಗಾಂಧಿ ಹೆಲ್ತ್ ಯೂನಿವರ್ಸಿಟಿಯವರು ನಡೆಸುವ ಕೌನ್ಸಿಲಿಂಗ್‌ನಲ್ಲಿ ಒಂದು ಸೀಟು ಅರವಳಿಕೆ ತಜ್ಞರ (MD-Anesthesia) ವಿಷಯದಲ್ಲಿ ಮೀಸಲಿಡಬೇಕೆಂದು ಕೋರಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ರವರಿಗೆ ಈ ಕಛೇರಿಯಿಂದ ಪತ್ರ ಬರೆಯಲಾಗಿದ್ದು, ಡಾ॥ ಎ.ಎಸ್. ಬಾಲಸುಂದರ್, ರವರಿಗೆ ಮೊದಲನೇ ಸುತ್ತಿನ ಕೌನ್ಸಿಲಿಂಗ್‌ನಲ್ಲಿ MD-Anesthesia ವಿಷಯದಲ್ಲಿ ಸೀಟು ದೊರಕಿರುವುದಿಲ್ಲ. ಬದಲಾಗಿ ಅಂತಿಮ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ದೊರಕಿದ್ದು, ದಿನಾಂಕ:19.06.2009ರಂದು ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ ಪ್ರವೇಶ ಪಡೆದು ಉನ್ನತ ವ್ಯಾಸಂಗಕ್ಕೆ ದಾಖಲಾಗಿರುತ್ತಾರೆ. ಡಾ॥ ಎ.ಎಸ್.ಬಾಲಸುಂದರ್,

ರವರು ಪಾಲಿಕೆಯ ಖಾಯಂ ನೌಕರರಾಗಿದ್ದು, ಇವರು ತಮ್ಮ ಸ್ವಂತ ಅರ್ಹತೆಯ ಮೇಲೆ PGET-2009 ಪರೀಕ್ಷೆಯಲ್ಲಿ ಸೀಟು ಗಳಿಸಿದ್ದು, ಇವರ ಸೇವೆಯನ್ನು ಉನ್ನತ ವ್ಯಾಸಂಗದ ನಂತರ ಪಾಲಿಕೆಯ ಆಸ್ಪತ್ರೆಗಳಲ್ಲಿ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಆದ್ದರಿಂದ ಡಾ॥ ಎ.ಎಸ್. ಬಾಲಸುಂದರ್, ರವರನ್ನು ಈಗಾಗಲೇ ನೀಡಿರುವ ಮಾನ್ಯ ಆಯುಕ್ತರ ಆದೇಶದಂತೆ ಹುಬ್ಬಳ್ಳಿಯ ಕಿಮ್ಸ್ ಕಾಲೇಜಿಗೆ ಉನ್ನತ ವ್ಯಾಸಂಗಕ್ಕೆ ಬಿಡುಗಡೆಗೊಳಿಸಿ ನಿಯೋಜಿಸಿರುವುದನ್ನು ಮಾರ್ಪಡಿಸಿ ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಲು ನಿಯೋಜಿಸಲು ಶಿಫಾರಸ್ಸು ಮಾಡುತ್ತಾ, ಆಯುಕ್ತರ ಕಛೇರಿಯಿಂದ ತಿದ್ದುಪಡಿ ಆದೇಶ ಹೊರಡಿಸಲು ಕೋರಿ ಕಡತವನ್ನು ಮಂಡಿಸಿರುತ್ತಾರೆ.

ಮುಖ್ಯ ಆರೋಗ್ಯಾಧಿಕಾರಿಗಳ ವರದಿಯನ್ವಯ ಡಾ॥ ಎ.ಎಸ್.ಬಾಲಸುಂದರ್, ಉಪ ಆರೋಗ್ಯಾಧಿಕಾರಿ(ಪೂರ್ವ)ರವರನ್ನು ಕಛೇರಿ ಆದೇಶದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಲು ಪಾಲಿಕೆಯ ವತಿಯಿಂದ ನಿಯೋಜಿಸಲ್ಪಾಗಿದೆ.

ಸದರಿಯವರು ಉನ್ನತ ವ್ಯಾಸಂಗ ಪೂರ್ಣಗೊಳಿಸಿ ದಿನಾಂಕ:23.05.2012ರಂದು ಪಾಲಿಕೆಗೆ ಹಿಂದಿರುಗಿ ಹಾಜರಾಗಿರುತ್ತಾರೆ. ಸದರಿಯವಳ ಹಾಜರಾತಿಯನ್ನು ಪರಿಗಣಿಸಿ ಇವರನ್ನು ಉನ್ನತ ವ್ಯಾಸಂಗಕ್ಕೆ ತೆರಳಿದ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉಪ ಆರೋಗ್ಯಾಧಿಕಾರಿ(ಪೂರ್ವ) ಹುದ್ದೆಗೆ ನಿಯೋಜಿಸಲಾಗಿದೆ.

ಮುಖ್ಯ ಆರೋಗ್ಯಾಧಿಕಾರಿಗಳವರ ಕಛೇರಿ ಆದೇಶದಲ್ಲಿ ಸದರಿಯವರನ್ನು ಉಪ ಆರೋಗ್ಯಾಧಿಕಾರಿ(ಪೂರ್ವ) ಕಛೇರಿಯ ಕೆಲಸ ಕಾರ್ಯಭಾರಗಳ ಜೊತೆಗೆ ಅಧಿಕವಾಗಿ- ಪೂರ್ವ ವಲಯದ ಪಾಲಿಕೆಯ ರೆಫೆರಲ್ ಆಸ್ಪತ್ರೆಗಳ ಅಗತ್ಯವಿದ್ದ ಕಡೆಗಳಲ್ಲಿ ಹಾಗೂ ಸಂಬಂಧಪಟ್ಟ ಆಸ್ಪತ್ರೆಗಳ ವೈದ್ಯಕೀಯ ಅಧೀಕ್ಷಕರುಗಳ ಕೋರಿಕೆಯ ಆದ್ಯತೆಯ ಮೇರೆಗೆ ಅರವಳಿಕೆ ಶಾಸ್ತ್ರದ ತಜ್ಞರಾಗಿ ಮುಂದಿನ ಆದೇಶವರೆವಿಗೂ ಕಾರ್ಯನಿರ್ವಹಿಸಲು ನೇಮಿಸಿರುತ್ತಾರೆ.

ಪ್ರಸ್ತುತ ಪಾಲಿಕೆಯ ಆಸ್ಪತ್ರೆಗಳಲ್ಲಿ ಅರವಳಿಕೆ ತಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ಸೇವೆ ಪಡೆದುಕೊಳ್ಳುತ್ತಿದ್ದು, ಇವರುಗಳಿಗೆ ಮೈನರ್ ಶಸ್ತ್ರಚಿಕಿತ್ಸೆಗೆ ರೂ.500/- ಹಾಗೂ ಮೇಜರ್ ಶಸ್ತ್ರ ಚಿಕಿತ್ಸೆಗೆ ರೂ. 1000/-ರಂತೆ ಒಂದು ರೆಫರಲ್ ಆಸ್ಪತ್ರೆಗೆ ತಿಂಗಳಿಗೆ ಸುಮಾರು 50,000/-ದಂತೆ 06 ರೆಫರಲ್ ಆಸ್ಪತ್ರೆಗಳಿಗೆ 2,50,000/- ದಿಂದ 3,00,000/-ರೂ ಗಳು ಖರ್ಚಾಗುತ್ತಲಿದ್ದು, ಆದ್ದರಿಂದ ಪಾಲಿಕೆಯ ವತಿಯಿಂದ ಅರವಳಿಕೆ ತಜ್ಞರ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗಕ್ಕೆ ನಿಯೋಜಿಸಿರುವುದರಿಂದ ಡಾ॥ ಎ.ಎಸ್. ಬಾಲಸುಂದರ್, ಉಪ



ಅಧ್ಯಕ್ಷರು
ನೌಕರರ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಆರೋಗ್ಯಾಧಿಕಾರಿ(ಪೂರ್ವ) ರವರನ್ನು ವಿಶೇಷ ಸ್ನಾತಕೋತ್ತರ ವಿಭಾಗದಲ್ಲಿ ಮುಂದುವರೆಸುವ ಬಗ್ಗೆ ದಿನಾಂಕ:29.09.2012ರ ಪಾಲಿಕೆಯ ಮಾಸಿಕ ಸಭೆಯಲ್ಲಿ ಚರ್ಚೆಯಾಗಿದ್ದು, ಈ ಸಂಬಂಧ ಅಭಿಪ್ರಾಯ ಪಡೆಯಲು ಕಡತವನ್ನು ಕಾನೂನು ಕೋಶದ ಮುಖ್ಯಸ್ಥರಿಗೆ ಕಳುಹಿಸಲಾಗಿ, ಕಾನೂನು ಕೋಶದ ಮುಖ್ಯಸ್ಥರು ಈ ಕೆಳಕಂಡಂತೆ ವರದಿ ನೀಡಿರುತ್ತಾರೆ.

"ಡಾ॥ ಎ.ಎಸ್.ಬಾಲಸುಂದರ್, (MD-Anesthesia) ರವರನ್ನು ಪಾಲಿಕೆಯ ಆರೋಗ್ಯ ವಿಭಾಗದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಆಯುಕ್ತರ ಅನುಮೋದನೆ ಪಡೆದು ಅರವಳಿಕೆ ತಜ್ಞರ (Anesthesia) ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಲು ನಿಯಮಾನುಸಾರ ಕ್ರಮವಹಿಸಬಹುದಾಗಿದೆ" ಎಂದು ಅಭಿಪ್ರಾಯಿಸಿರುತ್ತಾರೆ.

ಸದರಿ ವರದಿಗಳನ್ವಯ ಡಾ॥ ಎ.ಎಸ್. ಬಾಲಸುಂದರ್, ಉಪ ಆರೋಗ್ಯಾಧಿಕಾರಿ(ಪೂರ್ವ) ರವರು ಅರವಳಿಕೆ ತಜ್ಞರ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಪೂರ್ಣಗೊಳಿಸಿ ಹಿಂದಿರುಗಿರುವುದರಿಂದ ಇವರ ಮುಂದಿನ ಮುಂಬಡ್ತಿ ಹುದ್ದೆಯಾದ ಆರೋಗ್ಯಾಧಿಕಾರಿ ಹುದ್ದೆಗೆ ಸಮಾನಾಂತರವಾಗಿ ವೇತನ ಶ್ರೇಣಿ ರೂ.40050–56550 ರಲ್ಲಿ "ಅರವಳಿಕೆ ತಜ್ಞರ ವಿಭಾಗದ ಮುಖ್ಯಸ್ಥರು" ಹುದ್ದೆಯನ್ನು ಸೃಜಿಸುವ ಕುರಿತಂತೆ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:11.02.2013ರ ಸಂಖ್ಯೆ:ಬಿ12(4)ಪಿಆರ್/244/2008–09ರ ಟಿಪ್ಪಣಿ.

**ನಿರ್ಣಯ:**

ಈ ಕೆಳಕಂಡ ನ್ಯೂನತೆಗಳಿಗೆ ಸಂಬಂಧಿಸಿದಂತೆ ವಿವರಣೆಯೊಂದಿಗೆ ಮರುಮಂಡಿಸುವುದು.

(1) ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಈ ಹುದ್ದೆಯು ಮಂಜೂರಾಗಿರುವುದೇ?

(2) ಸದರಿ ವೈದ್ಯರನ್ನು ಈ ಹಿಂದೆ ಯಾವ ಉದ್ದೇಶಕ್ಕಾಗಿ ಉನ್ನತ ವ್ಯಾಸಂಗಕ್ಕೆ ಕಳುಹಿಸಲಾಗಿರುತ್ತದೆ ಹಾಗೂ ಇದಕ್ಕೆ ತಗಲಿರುವ ವೆಚ್ಚದ ವಿವರ ನೀಡುವುದು.

(3) ಸದರಿಯವರನ್ನು ಹುಬ್ಬಳ್ಳಿಯ ಕಿಮ್ಸ್ ಕಾಲೇಜಿಗೆ ಉನ್ನತ ವ್ಯಾಸಂಗದ ಸಲುವಾಗಿ ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಸಿ ನಿಯೋಜಿಸಿರುವ ದಿನಾಂಕದ ಬಗ್ಗೆ ವಿವರಣೆ.

(4) ಮೇಲ್ಕಂಡ ಆದೇಶವನ್ನು ಮಾರ್ಪಡಿಸಿ ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ (MD. Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಲು ನಿಯೋಜಿಸಲು ಶಿಫಾರಸ್ಸು ಮಾಡುತ್ತಾ ತಿದ್ದುಪಡಿ ಆದೇಶ ಹೊರಡಿಸಲು ಕೋರಿರುವ ಪ್ರಸ್ತಾವನೆಗೆ ನಿಯಮಾವಳಿಗಳಲ್ಲಿ ಅವಕಾಶವಿದಯೇ?

*(5) ಸದರಿ ವೈದ್ಯರು ಅರವಳಿಕೆ ತಜ್ಞರ ಹುದ್ದೆಯಲ್ಲಿ ಪಾಲಿಕೆ ವೆಚ್ಚದಿಂದ ಉನ್ನತ ವ್ಯಾಸಂಗ ಪಡೆದಿದ್ದು, ಅವರನ್ನು ಕ್ಲಿನಿಕಲ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುವ ಬದಲಿಗೆ ನಾನ್ ಕ್ಲಿನಿಕಲ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸಿರುವ ಕ್ರಮವು ಸಮಂಜಸವೇ.*

*(6) ಪ್ರಸ್ತಾವನೆ ಕುರಿತಂತೆ ವೇತನದ ವ್ಯತ್ಯಾಸ ವಿವರಣೆಗಳ ತಃಖ್ತೆ (Preposition Statement) ಕಡತದಲ್ಲಿ ಲಭ್ಯವಿರುವುದಿಲ್ಲ. ಈ ಬಗ್ಗೆ ಮಾಹಿತಿ ಒದಗಿಸುವುದು.*

*(7) ಈ ಪ್ರಕರಣವು ಪಾಲಿಕೆಯ ಆಸ್ಪತ್ರೆಗಳ ಹಿತದೃಷ್ಟಿಯಿಂದ ಅತಿ ಮುಖ್ಯವಾದ ವಿಷಯವಾಗಿದ್ದು ಇಲಾಖಾ ಮುಖ್ಯಸ್ಥರಾದ ಮುಖ್ಯ ಆರೋಗ್ಯಾಧಿಕಾರಿಗಳ ಅನುಪಸ್ಥಿತಿಯಿಂದಾಗಿ ಸಮಿತಿಯು ಯಾವುದೇ ವಿಧವಾದ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗದೇ ಇದ್ದು, ಸದರಿ ಅಧಿಕಾರಿಗಳ ಬೇಜವಾಬ್ದಾರಿ ಬಗ್ಗೆ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ.*

**ವಿಷಯ ಸಂಖ್ಯೆ: ಸಿಆಸುಸ್ಥಾಸ/32/2012–13**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಂಜೂರಾತಿಯಾಗಿ ಖಾಲಿ ಇರುವ 4,000 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಿಕೊಳ್ಳಲು ಈ ಕೆಳಕಂಡ ಷರತ್ತಿನನ್ವಯ ಸರ್ಕಾರವು ದಿನಾಂಕ:13.01.2010ರಂದು ಅನುಮೋದನೆ ನೀಡಿರುತ್ತದೆ.

<u>ಷರತ್ತುಗಳು:–</u>

1. ಹುದ್ದೆಗಳ ನೇಮಕಾತಿಯಿಂದ ತಗಲುವ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಪನ್ಮೂಲದಿಂದಲೇ ಭರಿಸತಕ್ಕದ್ದು.
2. ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವಾಗ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವಿಧಿವಿಧಾನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಸಂಬಂಧ ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆರವರಿಗೆ ವಿದ್ಯಾರ್ಹತೆಯನ್ನು 5ನೇ ತರಗತಿ ಉತ್ತೀರ್ಣ ಅಥವಾ 7ನೇ ತರಗತಿ ಅನುತ್ತೀರ್ಣ ಎಂದು ನಿಗದಿಪಡಿಸುವಂತೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ತಿದ್ದುಪಡಿ ತರುವ ಬಗ್ಗೆ ದಿನಾಂಕ:05.09.2012ರಂದು ಪತ್ರವನ್ನು ಬರೆದಿದ್ದು, ಈ ಬಗ್ಗೆ ದಿನಾಂಕ:10/09/2012ರ ಸರ್ಕಾರದ ಪತ್ರದಲ್ಲಿ ತಿಳಿಸಿರುವಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತರಬೇಕಾಗಿರುವ ತಿದ್ದುಪಡಿಯ ಕರಡನ್ನು ಜರೂರಾಗಿ ಕಳುಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ ಎಂದು ತಿಳಿಸಿರುತ್ತಾರೆ. ಇದರಂತೆ 4000 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಪಾಲಿಕೆಯಲ್ಲಿ ಸದ್ಯ ಪ್ರಸ್ತಾವನೆಯಲ್ಲಿರುತ್ತದೆ. ಈ ಸಂಬಂಧ ಸರ್ಕಾರದ ಪೂರ್ವಾನುಮತಿ ಮತ್ತು ಆಡಳಿತಾತ್ಮಕ ಅನುಮೋದನೆಯ ನಿರೀಕ್ಷಣೆಯ ಮೇರೆಗೆ ಪೌರಕಾರ್ಮಿಕರ ನೇರ ನೇಮಕಾತಿ ಹುದ್ದೆಗೆ ಜಾಹಿರಾತು ಮುಖೇನ ಅರ್ಜಿ ಸ್ವೀಕರಿಸಲು **ಹಾಗೂ** ಸದರಿ ಹುದ್ದೆಯ ನೇರ ನೇಮಕಾತಿ ಕುರಿತಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತರಬೇಕಾಗಿರುವ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ತಿದ್ದುಪಡಿಯ ಕರಡನ್ನು ಈ ಕೆಳಕಂಡಂತೆ ತಯಾರಿಸಿ ಅನುಮೋದನೆಯನ್ನು ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:01.02.2013ರ ಸಂಖ್ಯೆ:ಸ.ಅ.ನೇ/ಪಿಆರ್/53/2012–13ರ ಟಿಪ್ಪಣಿ.

| ಹುದ್ದೆಯ ಹೆಸರು | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ | ನೇಮಕಾತಿ ಪ್ರಾಧಿಕಾರದ ಅಧಿಕಾರಿ |
|---|---|---|---|
| ಸ್ಪೆಷಲ್ ಗ್ಯಾಂಗ್‌ಮೆನ್<br>ಎಂ.ಸಿ. ಗ್ಯಾಂಗ್‌ಮೆನ್<br>ಎ.ಎಲ್.ಓ. ಗ್ಯಾಂಗ್‌ಮೆನ್<br>ಸೈನೊಸೀಸ್ ಗ್ಯಾಂಗ್‌ಮೆನ್<br>ಡಿಸ್‌ಇನ್‌ಫೆಕ್ಟೆಂಟ್ ಗ್ಯಾಂಗ್‌ಮೆನ್<br>ಸ್ವೀಪರ್ಸ್ (ಪೌರಕಾರ್ಮಿಕರು) | ನೇರ ನೇಮಕಾತಿ | 5ನೇ ತರಗತಿ ಉತ್ತೀರ್ಣ ಅಥವಾ 7ನೇ ತರಗತಿ ಅನುತ್ತೀರ್ಣ.<br>ಕನ್ನಡ ಭಾಷೆ ಪರಿಜ್ಞಾನವಿರಬೇಕು. | ಆಯುಕ್ತರು (ಕಾರ್ಪೊರೇಷನ್ ಕಾಯ್ದೆ 89ರಡಿಯಲ್ಲಿ) |

**ನಿರ್ಣಯ:**

*ಪ್ರಸ್ತಾವನೆ ಕುರಿತಂತೆ ಈ ಕೆಳಕಂಡ ನಿರ್ಣಯ ಕೈಗೊಳ್ಳಲಾಗಿದೆ.*

*(1) ಪೌರಕಾರ್ಮಿಕರ ವೃಂದದ ಹುದ್ದೆಗಳಿಗೆ ನೇರ ನೇಮಕಾತಿ ಕುರಿತಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಅಗತ್ಯ ವಿದ್ಯಾರ್ಹತೆ ನಿಗಧಿಪಡಿಸುವ ಕುರಿತಂತೆ ಕಾನೂನು ಕೋಶದ ಮುಖ್ಯಸ್ಥರ ದಿನಾಂಕ:13.02.2013ರ ಅಭಿಪ್ರಾಯವನ್ನು ಪರಿಗಣಿಸಿ, ಈ ಸಂಬಂಧ ದಿನಾಂಕ:01.02.2013ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.*

*(2) 4000 ಮಂದಿ ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವ ಕುರಿತಂತೆ ನೇಮಕಾತಿ ಸಮಿತಿಯ ರಚನೆ ಬಗ್ಗೆ ಸರ್ಕಾರದ ಹಂತದಲ್ಲಿ ಕೂಡಲೇ ವ್ಯವಹರಿಸಿ ಸೂಕ್ತ ಆದೇಶವನ್ನು ಪಡೆಯಲು ಆಯುಕ್ತರನ್ನು ಕೋರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ.*

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.